ಅಚಲ

ತಿಂಗಳ ಪತ್ರಿಕೆ

ಡಿಸೆಂಬರ್ : 1998

- ವಿಶ್ವವಿದ್ಯಾಲಯದಲ್ಲಿ ಮಹಿಳಾ ವಿರೋಧಿ ಚಟುವಟಿಕೆಗಳು
- ಬಹುತೇಕ ಮೂತ್ರಪಿಂಡ ದಾನಿಗಳು ಮಹಿಳೆಯರೇ
- ಮಹಿಳಾ ಸಮಖ್ಯಾ - ಶೋಷಣೆಯ ಹೊಸ ಕತೆ
- ಹೆಣ್ಣು ಬಾಲಕಾರ್ಮಿಕರ ಜೀವನ ಮತ್ತು ಪರಿಸ್ಥಿತಿ
- 'ಕ್ಷಣಿಕವಲ್ಲದ ಕ್ಷಣಗಳು'

ಮಾನಸ

ತಿಂಗಳ ಪತ್ರಿಕೆ

ಸಂಪುಟ : 13 ಸಂಚಿಕೆ : 11

ಡಿಸೆಂಬರ್ : 1998

ಸಂಪಾದಕೀಯ ಮಂಡಳಿ :

ರಾಜೇಶ್ವರಿ ಎಚ್. ಎಸ್.

ಚಂಪಾವತಿ ಎಚ್. ಎಸ್., ಸರಸ್ವತಿ ದು.

ಸವಿತ ಎ., ಗೀತಾ

ಬಿ. ಎನ್. ಮಧುಮತಿ, ಶಾರದ, ಹೆಚ್. ಎಸ್. ಪುಷ್ಪ

ಸಲಹೆ - ಸಹಕಾರ :

ಇಳಾ ವಿಜಯಾ

ಸಹ ಸಂಪಾದಕರು :

ವನಜಾ ವೆಂ.

ನೀಲಾಂಜನ

ವಿಳಾಸ

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ :	ಬಿಡಿ ಪ್ರತಿ	**3-00**	ರೂ.
	ವಾರ್ಷಿಕ ಚಂದಾ	**40-00**	ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ......

ಮಾನಸ ಪ್ರತಿಗಳಿಗಾಗಿ

ಮೈಸೂರು

ಮೈಸೂರಿನಲ್ಲಿರುವ ಓದುಗರು ಮಾನಸ ಪ್ರತಿಗಳಿಗಾಗಿ ಹಾಗೂ ಚಂದಾ ನವೀಕರಣಕ್ಕಾಗಿ ಸಂಪರ್ಕಿಸಿ

ವೆಂ. ವನಜ

ಎಲ್. 3, ಏಳನೇ ತಿರುವು, ವಿ.ವಿ. ವಸತಿ ಗೃಹ

ಮಾನಸ ಗಂಗೋತ್ರಿ, ಮೈಸೂರು - 570 006

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭

ಸಂಪಾದಕೀಯ



ಟೆಲಿಫೋನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ ಗೆಳತಿಯೋರ್ವಳ ಬಗ್ಗೆ ಹೊಲಸು, ಹೊಲಸಾಗಿ ಪತ್ರಿಕೆಯಲ್ಲಿ ಪ್ರಕಟವಾದಾಗ ಆಕೆಗೆ ಆಘಾತವಾಗಿತ್ತು. ಪುಸ್ತಕವೊಂದನ್ನು ಬಿಡುಗಡೆ ಮಾಡಿದ ಪತ್ರಿಕೋದ್ಯಮಿ ಮಹಿಳೆಯೊಬ್ಬರು ಪುಸ್ತಕದ ಬಗ್ಗೆ ಪ್ರಶಂಸಾತ್ಮಕವಾಗಿ ಮಾತನಾಡಲಿಲ್ಲ ಎಂಬ ಕಾರಣಕ್ಕಾಗಿ ಅವರನ್ನು ಹಿಂದಿನಿಂದ ರಂಡೆ, ಮುಂಡೆ ಎಂದು ಕರೆಯಲಾಯಿತು. ಮಹಿಳೆಯರ ಬಗ್ಗೆ ಅಶ್ಲೀಲ ಭಿತ್ತಿ ಚಿತ್ರ, ಅಶ್ಲೀಲ ಬರವಣಿಗೆ, ಅವರ ನಡತೆಯ ಬಗ್ಗೆ ಅಪಪ್ರಚಾರ ಹೀಗೆ ನಾನಾ ವಿಧಗಳಲ್ಲಿ ಮಹಿಳೆಯರ ಮೇಲೆ ಹಲ್ಲೆ ನಡೆಯತೊಡಗಿದೆ. 'ಶಿಕ್ಷಣ'ಕ್ಕೆ ಮಾನ್ಯತೆ, ಘನತೆ ಹೊಂದಿದ 'ಮಾನಸ ಗಂಗೋತ್ರಿ'ಯ ಕುರಿತಾದ ವಿವರವಾದ ಲೇಖನವೊಂದನ್ನು ಈ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ. ಮಹಿಳೆಯರ ಧ್ವನಿಗಳು ಹೆಚ್ಚಾಗುತ್ತಿರುವ ಈ ಸಂದರ್ಭದಲ್ಲಿ, ಅವರ ಮೇಲಿನ ಹಿಂಸೆಯೂ ಹೆಚ್ಚಾಗುತ್ತಿದ್ದು ಬೇರೆ ಬೇರೆಯಾದ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿದೆ.

ಹೀಗೆ ನಾನಾ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಹಿಂಸೆ ಹಾಗೂ ಮಹಿಳೆಯರ ಮೇಲೆ ದೌರ್ಜನ್ಯಗಳು ಹೆಚ್ಚಾಗುತ್ತಿರುವ ಕಾರಣಗಳನ್ನು ನಾವು ಯೋಚಿಸಬೇಕಾಗುತ್ತದೆ. ಪಿತೃಪ್ರಾಧಾನ್ಯತೆ ತನ್ನ ಬೇರುಗಳನ್ನು ಕಳಚಿಕೊಳ್ಳುತ್ತಿರುವುದು ಈ ಹಿಂಸೆಗಳ ಹಿನ್ನೆಲೆಯಲ್ಲಿ ಮೊದಲ ಅಂಶವಾಗಿರಬಹುದು. ಹೆಂಗಸರು ಸಾರ್ವಜನಿಕ ಜೀವನದಲ್ಲಿ ಹೆಚ್ಚು ಹೆಚ್ಚಾಗಿ ಪ್ರವೇಶಿಸತೊಡಗಿದ್ದಾರೆ, ಮಾತನಾಡತೊಡಗಿದ್ದಾರೆ, ತಮ್ಮನ್ನು ತಾವೇ ಸಮರ್ಥಿಸಿಕೊಳ್ಳತೊಡಗಿದ್ದಾರೆ, ಪುರುಷರಿಗೆ ಮೀಸಲಾಗಿದ್ದ ಉನ್ನತ ಸ್ಥಾನಗಳಿಗೆ ಲಗ್ಗೆ ಹಾಕತೊಡಗಿದ್ದಾರೆ. ಕುಟುಂಬದಲ್ಲಿನ ಸ್ಥಾನ-ಮಾನಗಳು-ಏರುಪೇರಾಗತೊಡಗಿವೆ. ಇವೆಲ್ಲವೂ ಪಿತೃಪ್ರಾಧಾನ್ಯತೆಗೆ ಬೀಳುತ್ತಿರುವ ಬಲವಾದ ಹೊಡೆತಗಳು. ಹಾಗಾಗಿ ಪಿತೃಪ್ರಾಧಾನ್ಯತೆಯ ಜೊತೆಗಿರುವ ಧಾರ್ಮಿಕ/ಆರ್ಥಿಕ/ಸಾಂಸ್ಕೃತಿಕ ಸಾಮಾಜಿಕ ಅಂಶಗಳು ಹಿಂಸೆಯ ಮೂಲಕ ಹೆಂಗಸರನ್ನು ಮನೆಯ ಕಡೆಗೇ ತಳ್ಳಲು ಪ್ರಯತ್ನಿಸುತ್ತಿವೆ. ಮುಕ್ತ ಆರ್ಥಿಕ ನೀತಿಯಿಂದ, ಉದಾರೀಕರಣದಿಂದ, ಹೆಚ್ಚುತ್ತಿರುವ ಬೆಲೆಗಳು, ನಿರುದ್ಯೋಗ ಕೂಡಾ ಮಾನಸಿಕ ಅಶಾಂತಿಗೆ ಕಾರಣವಾಗಿ - ಈ ಅಶಾಂತಿ ಹಿಂಸೆಯ ರೂಪದಲ್ಲಿ ಹಿಂದೆ ಇದ್ದುದಕ್ಕಿಂತ ಹೆಚ್ಚು ಘೋರವಾದ ರೀತಿಯಲ್ಲಿ ಕಾಣಿಸಿಕೊಳ್ಳತೊಡಗಿದೆ.

ಮಾನಸಿಕ ಅಸ್ಥಿರತೆ, ಅಭದ್ರತೆ, ಹಿಂಸೆಯ ರೂಪಗಳನ್ನು ಜಾತಿ ರಾಜಕಾರಣದಲ್ಲಿ ಹಾಗೂ ಧರ್ಮ ರಾಜಕಾರಣದಲ್ಲಿ ಹೆಚ್ಚು ಹೆಚ್ಚಾಗಿ ಕಾಣಬಹುದಾಗಿದೆ. ರಾಜ್ಯ, ಪ್ರಭುತ್ವ ಇಂದು ಜನರ ಅವಶ್ಯಕತೆಗಳನ್ನು ಪೂರೈಸುವಲ್ಲಿ ಸಂಪೂರ್ಣವಾಗಿ ಸೋತಿವೆ. ಹಾಗೂ ಜಾತಿಯನ್ನು ಹಾಗೂ ಧರ್ಮವನ್ನು ಪರ್ಯಾಯವಾಗಿ ಬಳಸಿಕೊಂಡು ದಂಗೆ ಏಳತೊಡಗಿದ್ದಾರೆ. ತಮ್ಮನ್ನು ಹಾಗೂ ತಮ್ಮ ಆಸಕ್ತಿಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸತೊಡಗಿದ್ದಾರೆ. ತಮ್ಮನ್ನು ಸ್ಥಾನ, ಅಧಿಕಾರದಿಂದ ವಂಚಿಸುತ್ತಿದ್ದಾರೆಂದು ಮಹಿಳೆಯರ ಮೇಲೆ ದಂಗೆ ಏಳತೊಡಗಿದ್ದಾರೆ. ಹಾಗಾಗಿ ಹಿಂಸೆಯ ನಾನಾ ಮುಖಗಳು ನಾನಾ ರೂಪಗಳಲ್ಲಿ ಇಂದು ವ್ಯಕ್ತವಾಗತೊಡಗಿವೆ. ಹೆಣ್ಣಿನ ಮೇಲಿನ ದೌರ್ಜನ್ಯಗಳನ್ನು ವಿರೋಧಿಸುತ್ತಲೇ ಇದಕ್ಕೆಲ್ಲ ಪರೋಕ್ಷವಾಗಿ ಕಾರಣವಾಗುತ್ತಿರುವ ರಾಜ್ಯ ಹಾಗೂ ಪ್ರಭುತ್ವವನ್ನೂ ನಾವು ವಿರೋಧಿಸಬೇಕಾಗಿದೆ.

ವಿಶ್ವವಿದ್ಯಾಲಯದಲ್ಲಿ ಮಹಿಳಾ ವಿರೋಧಿ ಚಟುವಟಿಕೆಗಳು

'ಮಹಿಳಾ ಸಮಾನತೆ' 'ಮಹಿಳಾ ಸಬಲೀಕರಣ' ಮುಂತಾದ ಪದಪುಂಜಗಳು ಇತ್ತೀಚೆಗೆ ಎಲ್ಲೆಂದರಲ್ಲಿ ಎಲ್ಲರ ಬಾಯಲ್ಲಿ ನಲಿದಾಡುತ್ತಿರುವಾಗಲೇ, ಭಾರತ ಸರಕಾರ ಮಹಿಳಾ ಅಭಿವೃದ್ಧಿಯ ಮಾತಾಡುತ್ತಾ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವಾಗಲೇ, ಮಹಿಳೆಯರು ಈಗಾಗಲೇ ಎದುರಿಸುತ್ತಿರುವ ಹಲವು ಸಮಸ್ಯೆಗಳೊಂದಿಗೆ ಮತ್ತಷ್ಟು ಹೊಸ ಸಮಸ್ಯೆಗಳನ್ನು ಎದುರಿಸುವಂಥಾ ಪರಿಸ್ಥಿತಿಗಳು ನಿರ್ಮಾಣ ಗೊಳ್ಳುತ್ತಿವೆ. ಹಿಂದೊಮ್ಮೆ ಕೌಟುಂಬಿಕ 'ಪರಿಸರಕ್ಕೇ ಸೀಮೀತಗೊಂಡಿದ್ದ ಮಹಿಳೆಯರ ಬದುಕು ಸ್ವಲ್ಪ ಸ್ವಲ್ಪವೇ ಹೊರಜಗತ್ತಿಗೆ ವಿಸ್ತರಿಸುತ್ತಾ ಹೋಗುತ್ತಿದ್ದಂತೆ ಅವರು ಇದುವರೆಗೆ ಮನೆಯ ಒಳಗೇ ಅನುಭವಿಸುತ್ತಿದ್ದ ಹಲವು ಬಗೆಯ ದೌರ್ಜನ್ಯ, ತಾರತಮ್ಯಗಳು ಹೊಸ ರೂಪಗಳನ್ನು ತಾಳಿ ಅವರು ಪ್ರವೇಶಿಸುತ್ತಿರುವ ದುಡಿಮೆ, ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ಧುತ್ತೆಂದು ಅವರೆದುರು ನಿಲ್ಲುತ್ತಿವೆ. ಮಹಿಳೆಯರ ಶೋಷಣೆ ನಿಲ್ಲಬೇಕು; ಅವರು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು; ಇದಕ್ಕಾಗಿ ಅವರಿಗೆ ಶಾಸಕಾಂಗಗಳಲ್ಲಿ ಮೀಸಲಾತಿ ದೊರಕಬೇಕು ಎನ್ನುವ ಮಾತು ಎಲ್ಲೆಡೆ ಕೇಳಿಬರುತ್ತಿರುವಾಗಲೇ, ಮಹಿಳೆಯರ ಧೃತಿಗೆಡಿಸುವ ಆತ್ಮಸ್ಥೈರ್ಯವನ್ನು ಅಲ್ಲಾಡಿಸುವಂಥ ಘಟನೆಗಳು ನಡೆಯುತ್ತಿವೆ. ಮಹಿಳೆಯರ ಸ್ಥಾನ ಮನೆಯ ಹೊರಗೆ ಸುರಕ್ಷಿತವಲ್ಲ; ನಾಲ್ಕು ಗೋಡೆಗಳ ನಡುವಿನ ಬದುಕೇ ಹೆಚ್ಚು ಸುರಕ್ಷಿತ ಎಂಬ ಸಾಂಪ್ರದಾಯಿಕ ಭಾವನೆ ಗಟ್ಟಿಯಾಗುವಂಥ ಘಟನೆಗಳು ಅಲ್ಲಲ್ಲಿ ಸಂಭವಿಸುತ್ತಿರುವುದು ಒಂದು ವಿಪರ್ಯಾಸ.

ಇಷ್ಟೆಲ್ಲಾ ಪೀಠಿಕೆಗೆ ಕಾರಣ ಮೈಸೂರು ವಿಶ್ವವಿದ್ಯಾನಿಲಯದ ಆವರಣದ ಇತ್ತೀಚಿನ ಕೆಲವು ವಿದ್ಯಮಾನಗಳು. ಶೈಕ್ಷಣಿಕವಾಗಿ ಭವ್ಯ ಪರಂಪರೆಯುಳ್ಳ ಈ ವಿಶ್ವವಿದ್ಯಾನಿಲಯದ ಹೃದಯ ಭಾಗವಾದ ಮಾನಸಗಂಗೋತ್ರಿಯ ಆವರಣ ಇಂದು ಹಿಂದೆಂದಿಗಿಂತಲೂ ಹೆಚ್ಚು ಕಲುಷಿತವಾಗಿದೆ. ಇಲ್ಲಿ ಗುಂಪು ರಾಜಕೀಯ, ಜಾತಿ ರಾಜಕೀಯಗಳು ಮೇಲುಗೈ ಸಾಧಿಸುತ್ತಿರುವ ಪರಿಣಾಮವಾಗಿ ವಿವಿಧ ವಿಭಾಗಗಳಲ್ಲಿ ವಿವಿಧ ಹುದ್ದೆಗಳಲ್ಲಿ ದುಡಿಯುತ್ತಿರುವ ಮಹಿಳೆಯರು ಅಂಥ ಹೊಲಸು ರಾಜಕೀಯಕ್ಕೆ ಆಹಾರ ವಾಗುತ್ತಿದ್ದು ಅಂಥವರ ಪರಿಸ್ಥಿತಿ ದಿನೇದಿನೇ ಶೋಚನೀಯ ವಾಗುತ್ತಿದೆ. ಇವರ ಮೇಲೆ ನಡೆಯುವ ದೌರ್ಜನ್ಯಗಳ ಬದಲಾದ ರೂಪಗಳೆಂದರೆ, ಅನಾಮಧೇಯ/ಅಶ್ಲೀಲ ದೂರವಾಣಿ ಕರೆಗಳು, ಅನಾಮಧೇಯ/ಅಶ್ಲೀಲಬೆದರಿಕೆ ಪತ್ರಗಳು, ಅಶ್ಲೀಲ ಗೋಡೆಬರಹಗಳು, ಕರಪತ್ರಗಳು ಮುಂತಾದವು.

ಹಿಂದೊಮ್ಮೆ ತಮಗೆ ಹೆಚ್ಚು ಅಂಕಗಳನ್ನು ನೀಡಿಲ್ಲವೆಂಬ ಸುಳ್ಳು ಆರೋಪ ಹೊತ್ತ ಮಹಿಳಾ ಅಧ್ಯಾಪಕಿಯೊಬ್ಬರ ಮೇಲೆ ಅಶ್ಲೀಲ ಗೋಡೆ-ನೆಲಬರಹಗಳು ವಿಭಾಗವೊಂದರಲ್ಲಿ ರಾರಾಜಿಸಿದ್ದವು. ಇವರು ಹಲವು ವರ್ಷಗಳಿಂದ ಮೌಲ್ಯಮಾಪನ ಕಾರ್ಯವನ್ನೇ ಮಾಡದಿದ್ದ ವಿಷಯ ಗುಟ್ಟಿನದಾಗಿರಲಿಲ್ಲ ವಾದರೂ ಅಂಥ ಕುಚೇಷ್ಟೆಯ ವರ್ತನೆಗೆ ಗುರಿಯಾಗಿದ್ದುದು ಆಕಸ್ಮಿಕವೇನಾಗಿರಲಿಲ್ಲ. ಇದೇ ಸಾಲಿನಲ್ಲಿ ಮತ್ತೊಬ್ಬ ಮಹಿಳಾ ಅಧ್ಯಾಪಕಿಯನ್ನೇ ಉದ್ದೇಶಿಸಿದ ಅಶ್ಲೀಲ ಬರಹಗಳು ಇನ್ನೊಂದು ವಿಭಾಗದ ಗೋಡೆಗಳು ಕಂಡಿದ್ದವು. ಇಂಥದೇ ತಂತ್ರಗಳಿಗೆ ಬಲಿಯಾದ ಮಹಿಳೆಯರಲ್ಲಿ ಒಬ್ಬರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯೆಯಾಗಿದ್ದರೆ, ಇನ್ನೊಬ್ಬರು ಆಗತಾನೇ ವಿಶ್ವವಿದ್ಯಾನಿಲಯಕ್ಕೆ ಕಾಲಿಟ್ಟಿದ್ದ ಪ್ರೊಫೆಸರರಾಗಿದ್ದರು. ಇವರ ಮೇಲಿನ ಆರೋಪಗಳು, ಆಕ್ರೋಶಗಳು, ಸಂಪೂರ್ಣವಾಗಿ ರಾಜಕೀಯ ಪ್ರೇರಿತ, ಸಮಾಜ ವಿರೋಧೀ ಶಕ್ತಿಗಳ ಸಂಚು ಎನ್ನುವುದು ಮೇಲ್ನೋಟಕ್ಕೆ ತಿಳಿದು ಬಂದಿತ್ತು. ಆದರೆ ಈ ಯಾವುದೇ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗುವುದಿರಲಿ, ಪತ್ತೆ ಹಚ್ಚುವ ಕಾರ್ಯವೂ ಸಮರ್ಪಕವಾಗಿ ನಡೆಯಲಿಲ್ಲ. ಕ್ಯಾಂಪಸ್ಸಿನ ಶಾಂತವಾತಾವರಣವನ್ನು ಕದಡಿದ ದುಷ್ಟಶಕ್ತಿಗಳು ಹಿಂಸಾನಂದದಲ್ಲಿ ಹಾಗೇ ಕೆಲಕಾಲ ತೇಲಿಹೋಗಿದ್ದು ಈಗ ಮತ್ತೆ ಜಾಗೃತವಾಗಿರುವ ಸೂಚನೆ ದೊರಕಿದೆ.

ಇತ್ತೀಚಿನವರೆಗೆ ಕ್ಯಾಂಪಸ್ಸಿನ ವಾತಾವರಣ ಹೊಸ ಕುಲಪತಿಗಳ ಆಗಮನದೊಂದಿಗೇ ತಿಳಿಯಾಗಿದೆಯೆಂದು ನೆಮ್ಮದಿಯ ಉಸಿರುಬಿಡುತ್ತಿದ್ದಾಗಲೇ ಆಗಸ್ಟ್ ತಿಂಗಳಿ ನಿಂದೀಚೆಗೆ ಸತತವಾಗಿ ನಡೆಯುತ್ತಿರುವ ವಿದ್ಯಮಾನಗಳು ಮತ್ತೊಮ್ಮೆ ಮಹಿಳಾ ಉದ್ಯೋಗಿಗಳ ನೆಮ್ಮದಿ ಕೆಡಿಸಿವೆ. ಇದ್ದಕ್ಕಿದ್ದಂತೆ ನಡುರಾತ್ರಿಯಲ್ಲಿ ಬರುವ ಅನಾಮಧೇಯ/ಸುಳ್ಳು ನಾಮಧೇಯದ ದೂರವಾಣಿ ಕರೆಗಳು ಸಂಬಂಧಿಸಿದ ವ್ಯಕ್ತಿಗಳ ನಿದ್ದೆಯನ್ನು ಮಾತ್ರ ಕೆಡಿಸುತ್ತಿಲ್ಲ, ಮನೆಯವರ ಶಾಂತಿ-ನೆಮ್ಮದಿಗಳನ್ನೂ ನಾಶಮಾಡುತ್ತಿವೆ. ಅಶ್ಲೀಲತೆಯ ಪರಮಾವಧಿ ಎನ್ನಬಹುದಾದ ಅನಾಮಧೇಯ/ಖೋಟಾನಾಮಧೇಯರ

ಪತ್ರಗಳು, ಕೀಳು ಅಭಿರುಚಿಯ ಲೇಖನಗಳು ಕಪ್ಪು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದು ವಿಶ್ವವಿದ್ಯಾನಿಲಯದ ಪಾವಿತ್ರ್ಯವನ್ನು ಹಾಳುಮಾಡುವುದಷ್ಟೇ ಅಲ್ಲದೆ ಹಲವು ಕುಟುಂಬಗಳ ನೆಮ್ಮದಿ-ಶಾಂತಿಯನ್ನು ಭಂಗಮಾಡಿವೆ.

ತನ್ನ ಕರ್ತವ್ಯ ನಿಷ್ಠೆ, ದಿಟ್ಟತನಗಳಿಗೆ ಹೆಸರಾದ ಹಲವು ಸಾಮಾಜಿಕ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿರುವ ಒಬ್ಬ ಹಿರಿಯ ಅಧ್ಯಾಪಕಿ ವಿಶ್ವವಿದ್ಯಾನಿಲಯದ ವಸತಿಗೃಹಗಳ ಮುಖ್ಯಸ್ಥೆ ಹಾಗೂ ವಿದ್ಯಾರ್ಥಿ ಕ್ಷೇಮಪಾಲಕಿಯಾಗಿ ಇತ್ತೀಚೆಗೆ ನೇಮಕಗೊಂಡಿದ್ದರು. ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳುವ ಉದ್ದೇಶದಿಂದ ಹಲವು ಸುಧಾರಣಾ ಕ್ರಮಗಳನ್ನು ತರಲುದ್ದೇಶಿಸಿದರು. ಉದಾಹರಣೆಗೆ, ವಿದ್ಯಾರ್ಥಿಗಳೆಂದು ಹೇಳಿಕೊಳ್ಳುತ್ತಾ ವಸತಿನಿಲಯಗಳ ಕೊಠಡಿಗಳಿಗೆ ಬಂದು ಅಲ್ಲಿಯ ವಿದ್ಯಾರ್ಥಿಗಳನ್ನು ಬೆದರಿಸಿ ಅಲ್ಲಿಯೇ ವಾಸ್ತವ್ಯ ಹೂಡುತ್ತಿದ್ದ, ರಾತ್ರಿ ಹೊತ್ತಿನಲ್ಲಿ ಕುಡಿತ-ಜೂಜುಗಳ ಮೋಜು ಉಡಾಯಿಸುತ್ತಾ ವಾತಾವರಣವನ್ನು ಕಲುಷಿತಗೊಳಿಸುತ್ತಿದ್ದ ಕೆಲಮಂದಿಯನ್ನು ಅಲ್ಲಿಂದ ಪೇರಿಕೀಳಿಸಲು ನಡೆಸಿದ ಪ್ರಯತ್ನ ಫಲ ನೀಡಿತು. ಆದರೆ ಅಂಥ ದುಷ್ಟಶಕ್ತಿಗಳ ಕೆಂಗಣ್ಣುಗಳು ಇವರತ್ತ ಹರಿಯುವಂತೆ ಮಾಡಿತು. ಪರಿಣಾಮವಾಗಿ, ಇವರ ಮನೆಗೆ ತಿಂಗಳುಗಟ್ಟಲೆ ಅವೇಳೆಯ ಫೋನ್ ಕರೆಗಳ ಮೂಲಕ ಬಂದ ಅವಾಚ್ಯ ಬೈಗುಳಗಳು, ಅಶ್ಲೀಲ ಬಡಬಡಿಕೆಗಳು, ಬೆದರಿಕೆಗಳು ಮಾತ್ರವಲ್ಲ, ಕೊನೆಗೊಮ್ಮೆ ಅರ್ಧರಾತ್ರಿಯಲ್ಲಿ ನೂರಾರು ಮಂದಿಯ ಗುಂಪು ಇವರ ಮನೆ ಮುಂದೆ ಕಿರುಚಾಟ, ಹಾರಾಟ, ದೊಂಬರಾಟಗಳನ್ನು ನಡೆಸಿತು. ಅವರನ್ನು ನಿಯಂತ್ರಿಸಲು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಶತ ಪ್ರಯತ್ನ, ಪೋಲೀಸರ ನಿರ್ಲಿಪ್ತ ನಡವಳಿಕೆ ಇವರಲ್ಲಿ ಹತಾಶೆ ಮೂಡಿಸಿದ್ದರ ಪರಿಣಾಮ ರಾಜೀನಾಮೆಯಲ್ಲಿ ಮುಕ್ತಾಯ ವಾಯಿತು. ವಿಶ್ವವಿದ್ಯಾನಿಲಯ ಅಂಥ ಶಕ್ತಿಗಳ ವಿರುದ್ಧ ತೀವ್ರ ಕ್ರಮ ತೆಗೆದುಕೊಳ್ಳದೆ ಓಲೈಸಿದ ಪರಿಣಾಮವಾಗಿ ಅದು ಒಬ್ಬ ದಕ್ಷ, ಸಮರ್ಥ ಹಾಗೂ ಪ್ರಾಮಾಣಿಕ ಅಧಿಕಾರಿಣಿಯನ್ನು ಕಳೆದುಕೊಳ್ಳಬೇಕಾಯಿತೆನ್ನುವುದು ಒಂದು ದುರದೃಷ್ಟಕರ ಬೆಳವಣಿಗೆ ಎನ್ನಬೇಕಾಗುತ್ತದೆ. ತನ್ನ ಅಂದಿನ ಮನಃಸ್ಥಿತಿಯ ನೆನಪು ಇಂದು ಮಾಡಿಕೊಂಡರೂ ಭಾವೋದ್ರೇಕಕ್ಕೊಳಗಾಗುವ ಅವರನ್ನು ಕಂಡವರಿಗೆ ಆ ಕೆಟ್ಟ ಅನುಭವದ ತೀವ್ರತೆಯ ಬಿಸಿ ತಟ್ಟದೆ ಇರಲು ಸಾಧ್ಯವಿಲ್ಲ. ಇದೇ ಸಂದರ್ಭದಲ್ಲಿ ಅವರನ್ನು ಕುರಿತ ಕೀಳು ಅಭಿರುಚಿಯ ಬರಹವೊಂದು ಯಾವುದೋ ಕಂಡು ಕೇಳರಿಯದ ಪತ್ರಿಕೆಯೊಂದು ಪ್ರಕಟಿಸಿ ಮುಫತ್ತಾಗಿ ಹಂಚಿದುದು ಯಾರನ್ನಾದರೂ ಧೃತಿಗೆಡಿಸದಿರುವುದು ಸಾಧ್ಯವಿರಲಿಲ್ಲ.

ಈ ಘಟನೆ ನಡೆದ ಕೆಲವೇ ದಿನಗಳ ನಂತರದಲ್ಲಿ ಮಾನಸ ಗಂಗೋತ್ರಿಯ ವಿಭಾಗವೊಂದರ ವಿದ್ಯಾರ್ಥಿಗಳಿಂದ ಮಿಂಚಿನ ಮುಷ್ಕರ ಆರಂಭವಾಯಿತು. ಇದು ನಡೆದದ್ದು ಮೊದಲ ವರ್ಷದ ಎಂ.ಎ. ತರಗತಿಗೆ ಪ್ರವೇಶ ನೀಡಿದ ಕೆಲವೇ ದಿನಗಳಲ್ಲಿ. ತರಗತಿಗೆ ಹಾಜರಾಗುವುದಿರಲಿ, ತಮಗೆ ಬೋಧಿಸಲಿರುವ ಅಧ್ಯಾಪಕ ವರ್ಗದವರ ಪರಿಚಯವೇ ಆಗಿರದ ವಿದ್ಯಾರ್ಥಿ/ನಿಯರೂ ಮುಷ್ಕರದಲ್ಲಿ ಭಾಗವಹಿಸಿದ್ದರು! ಈ ವಿಭಾಗದಲ್ಲಿರುವ ಒಬ್ಬರೇ ಒಬ್ಬರಿದ್ದ ಮಹಿಳಾ ಪ್ರಾಧ್ಯಾಪಕಿಯನ್ನೇ ಮುಖ್ಯವಾಗಿಸಿಕೊಂಡು ಮುದ್ರಿಸಿದ್ದ ಕರಪತ್ರ ವಸ್ತು ನಿಷ್ಠತೆಯ ಸೋಗಿನಡಿಯಲ್ಲಿ ಮೆರೆದ ದೌರ್ಜನ್ಯದ ಪ್ರತೀಕವಾಗಿತ್ತು. ಇಪ್ಪತ್ತಕ್ಕಿಂತ ಹೆಚ್ಚು ವರುಷ ಗಳಿಂದ ಅಧ್ಯಾಪನ ಮಾಡಿರುವ, ಹತ್ತಾರು ವಿದ್ಯಾರ್ಥಿಗಳಿಗೆ ಡಾಕ್ಟರೇಟ್ ಪದವಿ ಕೊಡಿಸಿದ ಇವರಿಗೆ ಡಾಕ್ಟರೇಟ್ ಪದವಿಯೇ ಇಲ್ಲ ಎಂದು ಅಪಪ್ರಚಾರ ಮಾಡಲಾಗಿತ್ತು. ಎರಡನೇ ರ್‍ಯಾಂಕ್ ಪಡೆದ ವಿದ್ಯಾರ್ಥಿನಿಯೊಬ್ಬಳನ್ನು ಡ್ರಗ್ ಮಾಫಿಯಾ ಹುಡುಗಿ ಎಂದು ಬಣ್ಣಿಸುವವರೆಗೂ ಪ್ರಕರಣ ಮುಂದುವರೆಯಿತು. ವಸ್ತುಸ್ಥಿತಿಯನ್ನು ವಿಶ್ಲೇಷಿಸುವುದು, ತಪ್ಪಾಗಿದ್ದರೆ ಪ್ರಶ್ನಿಸುವುದು, ನ್ಯಾಯ ಕೇಳುವುದು ಸಮಂಜಸವಾದುದಾದರೂ ಹಲವು ಆಡಳಿತಾತ್ಮಕ ಮಾಹಿತಿಗಳು ನಿಖರವಾದುದೆಂದು ಹೇಳಲು ವಿದ್ಯಾರ್ಥಿಗಳಿಗೆ ಸಾಧ್ಯವಾದುದಾದರೂ ಹೇಗೆಂಬ ಪ್ರಶ್ನೆಗೆ ಉತ್ತರವನ್ನು ಹುಡುಕುವುದು ವಿಶ್ವವಿದ್ಯಾನಿಲಯಕ್ಕೆ ಕಷ್ಟವೇನಲ್ಲ. ಒಟ್ಟಿನಲ್ಲಿ ಈ ಹಗರಣ ಸಂಬಂಧಿಸಿದ ಮಹಿಳೆಯ ನೆಮ್ಮದಿ, ಆತ್ಮಸ್ಥೈರ್ಯವನ್ನು ಕೆಲಕಾಲದವರೆಗಾದರೂ ಹಾಳು ಮಾಡಿತೆನ್ನುವುದು ಸುಳ್ಳೇನಲ್ಲ.

ಮಹಿಳಾ ವಿರೋಧಿ ಧೋರಣೆ ವಿಶ್ವವಿದ್ಯಾನಿಲಯದ ಆವರಣದಲ್ಲಿ ಎಷ್ಟು ಅಗಾಧವಾಗಿದೆ, ಆಳವಾಗಿ ಬೇರು ಬಿಟ್ಟಿದೆಯೆನ್ನುವುದಕ್ಕೆ ಹಲವು ಉದಾಹರಣೆಗಳು ದೊರೆಯುತ್ತವೆ.

ಇತ್ತೀಚೆಗೆ ವಿಭಾಗವೊಂದರಲ್ಲಿ ಸಾಹಿತ್ಯ ಸಂಘಕ್ಕಾಗಿ ನಡೆದ ಚುನಾವಣೆಯಲ್ಲಿ ವಿದ್ಯಾರ್ಥಿನಿಯೊಬ್ಬಳು ಗೆದ್ದಳು. ಈ ಹಿಂದೆ ವಿದ್ಯಾರ್ಥಿ ಸಂಘಟನೆಗಳಲ್ಲಿ ನಾಯಕತ್ವ ವಹಿಸಿದ ಅನುಭವವುಳ್ಳ, ಪ್ರತಿಭಾವಂತ ಹಾಗೂ ಚುರುಕಿನ ಹುಡುಗಿಯಾದ ಈಕೆ ತನ್ನ ಸಹಪಾಠಿಗಳಿಗೆ ಅಚ್ಚುಮೆಚ್ಚಿನವಳಾಗಿದ್ದರೆ ಆಶ್ಚರ್ಯವಿಲ್ಲ. ಸಮಸ್ಯೆ ಆರಂಭವಾದದ್ದು ಇಲ್ಲಿಯೇ. ಅವಳ ಆಯ್ಕೆ ಕೆಲವರಿಗೆ ಇಷ್ಟವಾಗಲಿಲ್ಲ. 'ಹೆಣ್ಣು ಮಕ್ಕಳಿಗೇಕೆ ಅಧ್ಯಕ್ಷಗಿರಿ? ಅದೇನಿದ್ದರೂ ಪುರುಷರಿಗೇ ದಕ್ಕಬೇಕು' ಎನ್ನುವುದು ಅವರ ಧೋರಣೆಯಾಗಿತ್ತು. ಹೀಗೆ ಹುಟ್ಟಿಕೊಂಡ ಸಮಸ್ಯೆಯಿಂದಾಗಿ ಚುನಾವಣೆ ಫಲಿತಾಂಶಕ್ಕೆ ಕವಡೆಯ ಬೆಲೆಯೂ

ಇಲ್ಲವಾಯಿತು. ಅಂತಿಮವಾಗಿ, ಪ್ರತಿಭಾವಂತ ಅರ್ಹ ವಿದ್ಯಾರ್ಥಿನಿಯೊಬ್ಬಳು ಆ ಸ್ಥಾನದಿಂದ ವಂಚಿತಳಾಗ ಬೇಕಾಯಿತು.

ಸಾಮಾನ್ಯವಾಗಿ ಯಾವುದೇ ಹೋರಾಟಗಳಲ್ಲಿ/ ಸಂಘರ್ಷಗಳಲ್ಲಿ - ಧರ್ಮ, ಜಾತಿ, ಭಾಷೆ, ದೇಶ-ದೇಶಗಳ ನಡುವಿನ ಹೋರಾಟಗಳಲ್ಲಿ - ಬಲಿಯಾಗುವವರು ಸಂಬಂಧಿಸಿದ ಮಹಿಳೆಯರೇ ಆಗಿರುತ್ತಾರೆ. ಹಾಗೇ ವ್ಯಕ್ತಿ-ವ್ಯಕ್ತಿಗಳ ನಡುವಿನ ತಿಕ್ಕಾಟಗಳಲ್ಲೂ ಆ ವ್ಯಕ್ತಿಗಳಿಗೆ ಸಂಬಂಧಪಟ್ಟ ಮಹಿಳೆಯರು, ಹೆಣ್ಣುಮಕ್ಕಳು ಬಲಿಯಾಗುತ್ತಾರೆನ್ನುವುದು ಕೂಡ ಅಷ್ಟೇ ಸತ್ಯ. ಇತ್ತೀಚೆಗೆ ಇದೇ ವಿಶ್ವವಿದ್ಯಾನಿಲಯದ ನೆಚ್ಚಿನ ಹಿರಿಯ ಪ್ರಾಧ್ಯಾಪಕರೊಬ್ಬರನ್ನು ನಾನು ಭೇಟಿಯಾದಾಗ ಹೇಳಿದ ಮಾತು ಸುಲಭವಾಗಿ ತಳ್ಳಿಹಾಕಿಬಿಡಬಹುದಾದಂತಹದೆಂದು ನನಗನ್ನಿಸುವುದಿಲ್ಲ. ಮೈಸೂರಿನಲ್ಲಿ ನಡೆಯುವ ಯಾವುದೇ ಪ್ರಗತಿಪರ ಹೋರಾಟಗಳ ಮುಂಚೂಣಿಯಲ್ಲಿರುವ, ನಿರ್ಭಯತೆಗೆ, ದ್ವಂದ್ವಾತೀತ ವ್ಯಕ್ತಿತ್ವಕ್ಕೆ ಹೆಸರಾದ, ಈಗ ಅನಾರೋಗ್ಯದಿಂದ ಬಳಲುತ್ತಿರುವ ಇವರಿಗೆ ಬಂದ ಅನಾಮಧೇಯ ಪತ್ರವೊಂದರಲ್ಲಿ, ಅವರು ತಮ್ಮ ಬಾಯಿ ಮುಚ್ಚಿಕೊಂಡು ಸುಮ್ಮನಿರದಿದ್ದರೆ, ಅವರಿಗೆ ತಿಳಿದ ಮಹಿಳೆಯೊಬ್ಬರ ಮನೆಯ ಗೋಡೆಗಳ ಮೇಲೆ ಅವಳೊಂದಿಗೆ ಅನೈತಿಕ ಸಂಬಂಧ ಹೊಂದಿರುವುದಾಗಿ ಬರೆಯಲಾಗುತ್ತದೆಂಬ ಬೆದರಿಕೆ ಹಾಕಲಾಗಿತ್ತು ಎಂಬ ಸಂಗತಿ ಕೇಳಿದ ನನಗೆ ಬೆದರಿಕೆಯ ಇಂಥ ಒಂದು ಸಾಧ್ಯತೆ ಇದೆಯೆಂಬ ಕಲ್ಪನೆಯಿಂದಲೇ ದಿಗ್ಭ್ರಮೆಯಾಯಿತು.

ಇಂಥ ಪ್ರಕರಣಗಳು ಹುಡುಕಿದರೆ ಮತ್ತಷ್ಟು ಸಿಗಬಹುದಾದರೂ, ಇನ್ನೆಷ್ಟೋ ಸಂಗತಿಗಳು ಹುಟ್ಟಿದಂತೆಯೇ ಸಾಯುತ್ತವೆ. ತಮಗಾಗುತ್ತಿರುವ ನೋವು, ಹಿಂಸೆಗಳನ್ನು ಹೇಳಿಕೊಳ್ಳಲಾಗದೆ ತಮ್ಮ ಅಂತರ್ಯದಲ್ಲೇ ಹುದುಗಿಸಿಟ್ಟು ಕೊಂಡು-ಬೂದಿಮುಚ್ಚಿದ ಕೆಂಡದಲ್ಲಿ ಹಲವು ಮಹಿಳೆಯರು ಬೇಯುತ್ತಿರುವ ಸಾಧ್ಯತೆಯಿದೆ.

ಈ ಎಲ್ಲ ಘಟನೆಗಳ ಮೇಲೆ ಮತ್ತೊಮ್ಮೆ ಕಣ್ಣಾಡಿಸಿದಾಗ, ಮೇಲ್ನೋಟಕ್ಕೆ ಕಂಡುಬರುವ ಕೆಲವು ಮುಖ್ಯ ಅಂಶಗಳೆಂದರೆ, ವಿ. ವಿ. ಆವರಣದಲ್ಲಿ ಈಗಾಗಲೇ ಅಲ್ಪಸಂಖ್ಯಾತರಾಗಿರುವ ಮಹಿಳೆಯರಲ್ಲಿ ಕೆಲವರನ್ನು - ಬದುಕಿನಲ್ಲಿ ಏನನ್ನಾದರೂ ಸಾಧಿಸಬೇಕೆಂಬ ಛಲದಿಂದ ಹೊರಟು ತಮ್ಮ ತಮ್ಮ ಕ್ಷೇತ್ರಗಳಲ್ಲಿ ತಮ್ಮನ್ನು ಗುರುತಿಸಿಕೊಂಡವರು, ಮಹಿಳಾ ಹೋರಾಟಗಳಲ್ಲಿ ಭಾಗವಹಿಸುವವರು, ಮಹಿಳೆಯರ ಪರವಾಗಿ ಮಾತನಾಡು ವವರು/ಬರೆಯುವವರು, ಪ್ರಗತಿಪರ ಚಳುವಳಿಗಳಲ್ಲಿರುವವರು, ತಮ್ಮ ಪ್ರತಿಭೆಯಿಂದಾಗಿ ಸಮಾಜದಲ್ಲಿ ಗುರುತಿಸಿಕೊಂಡವರು - ಆಯ್ದು ಇಂಥ ಮಾನಸಿಕ ಹಿಂಸೆಗೆ ಗುರಿಮಾಡುವುದು, ಅವರ ಸಾರ್ವಜನಿಕ ಬದುಕಿನಲ್ಲಿ ಕಪ್ಪು ಚುಕ್ಕೆಗಳನ್ನು ಹಾಕಿ ಅವರನ್ನು ಆ ಬದುಕಿನಿಂದ ಹಿಂಜರಿಯುವಂತೆ ಮಾಡುವುದು, ಅವರ ವ್ಯಕ್ತಿತ್ವದ ಮೇಲೆ ಕಳಂಕವನ್ನು ಹೊರಿಸುವುದು ಮುಂತಾದ ನೀಚ ಕೆಲಸಗಳಿಗಾಗಿ ಸಂಪರ್ಕ ಮಾಧ್ಯಮಗಳನ್ನು, ಸಮೂಹ ಮಾಧ್ಯಮಗಳನ್ನು ಬಳಸಿಕೊಳ್ಳುವುದು; ಇಲ್ಲವೇ ಹೊಸದಾಗಿ ಹುಟ್ಟುಹಾಕುವುದು ಮುಂತಾದ್ದವುಗಳನ್ನೆಲ್ಲಾ ಗಮನಿಸಿದಾಗ ಇವುಗಳ ಹಿಂದೆ ಸಮಾಜ ವಿರೋಧಿ ಶಕ್ತಿಯ ವ್ಯವಸ್ಥಿತ ವಾದೊಂದು ಜಾಲವೇ ಇದೆಯೆನ್ನುವ ಅನುಮಾನ ಗಟ್ಟಿಯಾಗುತ್ತಾ ಹೋಗುತ್ತದೆ. ಈ ಹಿಂದೆ ರಾಜಸ್ಥಾನದ ಜೈಪುರ ವಿಶ್ವವಿದ್ಯಾನಿಲಯದ ಆವರಣದಲ್ಲಿ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯಗಳ ಹಿಂದೆ ವ್ಯವಸ್ಥಿತ ಜಾಲವೊಂದಿದ್ದುದು ಬೆಳಕಿಗೆ ಬಂದ ಹಿನ್ನೆಲೆಯಲ್ಲಿ, ದೌರ್ಜನ್ಯದ ಬದಲಾದ ಸ್ವರೂಪಗಳನ್ನು ಇಲ್ಲಿಯ ಪ್ರಕರಣಗಳಲ್ಲಿ ಕಂಡು ಬರುತ್ತಿರುವುದನ್ನು ಗಮನಿಸಿದಾಗ ಅಂತಹದೇ ಸಾಧ್ಯತೆ ಇಲ್ಲಿಯೂ ಇರುವ ಗುಮಾನಿ ಆಧಾರರಹಿತವಾದದ್ದೆಂದು ನನಗನ್ನಿಸುವುದಿಲ್ಲ. ಅದೇನಾದರೂ ಇದ್ದಲ್ಲಿ ವಿಶ್ವವಿದ್ಯಾನಿಲಯ ಹಾಗೂ ಪೊಲೀಸು ಇಲಾಖೆ ಸುಮ್ಮನೆ ಕೈಕಟ್ಟಿಕೂರುವಂತಿಲ್ಲ. ಇಂಥ ಶಕ್ತಿಗಳ ಜಾಲವನ್ನು ಭೇದಿಸುವಲ್ಲಿ, ಅವುಗಳ ಚಟುವಟಿಕೆಗಳನ್ನು ತಡೆಗಟ್ಟುವಲ್ಲಿ ವಿಶ್ವವಿದ್ಯಾನಿಲಯ ನಿಷ್ಪಕ್ಷಪಾತ ತನಿಖೆ, ಸೂಕ್ತ ಕ್ರಮಗಳನ್ನು ನಿರ್ದಾಕ್ಷಿಣ್ಯವಾಗಿ ತೆಗೆದುಕೊಳ್ಳುವ ಮೂಲಕ ಪೊಲೀಸು ಇಲಾಖೆಗೆ ಸಹಕರಿಸುವುದು ಅತ್ಯವಶ್ಯ. ಅಂತೆಯೇ ಪೊಲೀಸು ಇಲಾಖೆ ಕೂಡಾ 'ಮುಖ ನೋಡಿ ಮಣೆ ಹಾಕದೆ' ಜಾತಿ-ಧರ್ಮ-ಹಣದ ಎಣಿಕೆ ಹಾಕದೆ, ರಾಜಕೀಯ ಪ್ರಭಾವಗಳಿಗೆ ಮಣಿಯದೆ, ನಿಷ್ಠುರ ಕ್ರಮಗಳನ್ನು ತೆಗೆದುಕೊಂಡಲ್ಲಿ ಮಾತ್ರ ಇಲ್ಲಿಯ ವಾತಾವರಣ ತಿಳಿಯಾಗಲು ಸಾಧ್ಯ. ಇದು ಇಂದಿನ ತುರ್ತು ಅಗತ್ಯವಾಗಿದೆ.

- ವೆಂ. ವನಜ, ಮೈಸೂರು

ಲಿಂಗ ಅಸಮಾನತೆಯಲ್ಲಿ ಉತ್ತರ ಪ್ರದೇಶ ಮೊದಲ ಸ್ಥಾನದಲ್ಲಿದೆ. ಅಧ್ಯಯನವೊಂದರ ಪ್ರಕಾರ ಶೇ. 70ರಷ್ಟು ಮಹಿಳೆಯರು ಕೆಲಸ ಮಾಡುವ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ಅನುಭವಿಸುತ್ತಾರೆ.

ಬಹುತೇಕ ಮೂತ್ರಪಿಂಡ ದಾನಿಗಳು ಮಹಿಳೆಯರೇ

- ಲಕ್ಷ್ಮಿ ಮೂರ್ತಿ

ಅಂಗಜೋಡಣೆಯ ಆಧುನಿಕ ತಾಂತ್ರಿಕ ವಿಶ್ವಕ್ಕೂ, ನಿಸ್ವಾರ್ಥಿ, ತ್ಯಾಗಮಯಿ ಹಾಗೂ ಆತ್ಮ ನಿರಾಕರಣೆಯ ಭಾರತೀಯ ಮಹಿಳೆಯ ಪಾರಂಪರಿಕ ಪ್ರತಿಮೆಗೂ ಏನು ಸಂಬಂಧ? ಲಭ್ಯವಿರುವ ಮಾಹಿತಿಗಳನ್ನು ಆಧರಿಸಿ ಹೇಳುವುದಾದರೆ 'ಬಹಳಷ್ಟಿದೆ'.

೧೯೭೩ರಿಂದ ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಎಐಐಎಂಎಸ್)ಯಲ್ಲಿ ಕೈಗೊಳ್ಳಲಾದ ಸುಮಾರು ೬೦೦ ಅಂಗಜೋಡಣೆಗಳಲ್ಲಿ, ಬಹುತೇಕ ಮೂತ್ರಪಿಂಡ ದಾನಿಗಳು ಮಹಿಳೆಯರೇ. ಇದಕ್ಕೆ ಪ್ರತಿಯಾಗಿ ಅಂಗಗಳನ್ನು ದಾನವಾಗಿ ಪಡೆದಿರುವ ಹೆಚ್ಚಿನವರು ಪುರುಷರೇ ಎನ್ನುತ್ತಾರೆ ಎಐಐಎಂಎಸ್‌ನ ಮೂತ್ರಪಿಂಡ ಇಲಾಖೆಯ ಮುಖ್ಯಸ್ಥ ಡಾ. ಎಸ್.ಸಿ.ದಶ್.

ಸಾಮಾನ್ಯವಾಗಿ ತಾಯಂದಿರು ತಮ್ಮ ಮಕ್ಕಳಿಗೆ ಬಹಳ ಸಂದರ್ಭಗಳಲ್ಲಿ ಪುತ್ರರಿಗೆ ಮೂತ್ರಪಿಂಡ ದಾನ ಮಾಡುತ್ತಾರೆ. ಮಹಿಳೆಯರು ತಾವೇ ಸ್ವತಃ ನರಳುವವರೂ ಆಗಿರುವುದರಿಂದ, ವಯಸ್ಸು ಹೆಚ್ಚಾಗಿದ್ದರಂತೂ ದಾನಿಗಳನ್ನು ಪಡೆದುಕೊಳ್ಳುವುದು ಕಷ್ಟ.

"ಮೂತ್ರಪಿಂಡದ ವೈಫಲ್ಯಕ್ಕೆ ಖಚಿತವಾಗಿ ಮೂತ್ರಪಿಂಡ ಜೋಡಣೆಯಷ್ಟೇ ಉಳಿದ ದಾರಿ ಎಂಬುದು ಖಚಿತವಾದಾಗ ಮೂತ್ರಪಿಂಡ ದಾನ ಮಾಡಲು ಮುಂದೆ ಬರುವುದು ಸಾಮಾನ್ಯವಾಗಿ ತಾಯಂದಿರೇ. ತಂದೆಯ ಅಂಗಾಂಶ ಹೊಂದಾಣಿಕೆಯ ಸಾಧ್ಯತೆಯೂ ಶೇಕಡಾ ೫೦ರಷ್ಟಿದ್ದರೂ ಮೂತ್ರಪಿಂಡ ದಾನ ಮಾಡಲು ತಂದೆ ಮುಂದೆ ಬರುವುದು ಕಡಿಮೆ" ಎನ್ನುತ್ತಾರೆ ದಶ್.

ಮೂತ್ರಪಿಂಡ ದಾನದಿಂದ ಸೃಷ್ಟಿಕ್ರಿಯೆಯ ಸಾಮರ್ಥ್ಯ ಕುಗ್ಗುವುದು ಎಂಬ ನಂಬಿಕೆ ಈ ಬಗೆಯ ದಾನಿ - ತಾಯಿಯ ಪ್ರಕ್ರಿಯೆಗೆ ಕಾರಣವಾಗಿದೆ. ಆದರೆ ಈಗಿರುವ ಸಂಶೋಧನೆಯ ಮಾಹಿತಿಗಳ ಪ್ರಕಾರ, ದಾನಿಯ ಆರೋಗ್ಯ ಅಥವಾ ದೀರ್ಘಾಯುಸ್ಸಿಗೆ ತೊಂದರೆ ಇಲ್ಲ. ಆದರೂ ಕುಟುಂಬಕ್ಕೆ ಅನ್ನ ಹಾಕುವ ತಮ್ಮ ಪತಿಯಂದಿರಿಗಿಂತ ತಮಗೆ ಅನಾರೋಗ್ಯ ಉಂಟಾದರೂ ಪರವಾಗಿಲ್ಲ ಎಂದು ಮಹಿಳೆಯರು ಭಾವಿಸುತ್ತಾರೆ. ತಾವು ಮನೆಗಳಲ್ಲಿ ಅಷ್ಟೇ ಕಠಿಣ ದುಡಿಮೆ ಮಾಡುವುದು ಗಣನೆಗೇ ಬರುವುದಿಲ್ಲ.

೧೦ ವರ್ಷಗಳ ಹಿಂದೆ ಮೂತ್ರಪಿಂಡ ಜೋಡಣೆಗೆ ಒಳಗಾದ ಗುವಾಹಟಿ ಮೂಲದ ಬಿಸ್ವಜಿತ್ ಸೈಕಿಯಾ (೨೪) ಮಾತುಗಳು ಈ ಬಗೆಯ ಧೋರಣೆಗೆ ಪುಷ್ಟಿ ನೀಡುತ್ತದೆ. "ನನಗೆ ಮೂತ್ರಪಿಂಡ ಜೋಡಣೆ ಅಗತ್ಯವಾದಾಗ, ನನ್ನ ತಾಯಿ ತನ್ನ ಒಂದು ಮೂತ್ರಪಿಂಡ ಕೊಡಲು ತಕ್ಷಣವೇ ಮುಂದೆ ಬಂದಳು" ಎಂದು ಅವರು ಹೇಳುತ್ತಾರೆ.

ಮೂತ್ರಪಿಂಡ ಜೋಡಣೆಗೆ ಒಳಗಾದ ವ್ಯಕ್ತಿಯಾಗಿ ಸೋಂಕುಗಳಿಗೆ ಒಳಗಾಗಬಹುದಾದ ಭೀತಿಯಿಂದ ವೈದ್ಯಕೀಯ ಶಿಕ್ಷಣ ಮುಂದುವರಿಸುವ ಸೈಕಿಯಾ ಅವರ ಮಹತ್ವಾಕಾಂಕ್ಷೆ ಈಡೇರಿಲ್ಲ. ಅವರು ಈಶಾನ್ಯ ಮೂತ್ರಪಿಂಡ ವೇದಿಕೆಯ ಸಂಸ್ಥಾಪಕ ಅಧ್ಯಕ್ಷರಾಗಿದ್ದಾರೆ. ಈ ವೇದಿಕೆ ೧೯೯೬ರವರೆಗೂ ೨೩೦ ಸದಸ್ಯರನ್ನು ಹೊಂದಿತ್ತು.

ದೆಹಲಿ ಮೂಲದ ಸಂದೀಪ್ ಶರ್ಮಾ (೨೫) ಅವರೂ ತಮ್ಮ ಕಥೆಯನ್ನು ಹೀಗೆ ಹೇಳುತ್ತಾರೆ. "೮ ವರ್ಷಗಳ ಹಿಂದೆ ನಾನು ಮೂತ್ರಪಿಂಡ ಜೋಡಣೆಯ ಸನ್ನಿವೇಶಕ್ಕೆ ಸಿಲುಕಿದಾಗ ಸಲಹೆ ಅಥವಾ ಬೆಂಬಲಕ್ಕೆ ಯಾರೂ ಇರಲಿಲ್ಲ. ಮೂತ್ರಪಿಂಡ ದಾನಿಯಾಗಿದ್ದ ನನ್ನ ತಾಯಿಗೆ ಅದರ ಪರಿಣಾಮಗಳ ಅರಿವಿರಲಿಲ್ಲ. ನಾನು ಚೆನ್ನಾಗಬೇಕು ಎಂಬುದಷ್ಟೇ ಆಕೆಯ ಹೆಬ್ಬಯಕೆಯಾಗಿತ್ತು, ಈ ನೋವು ತಾಳಿಕೊಳ್ಳಲೂ ಆಕೆ ಮಾನಸಿಕವಾಗಿ ಸಿದ್ಧಳಿರಲಿಲ್ಲ. ಆಕೆಯೇ ಸ್ವತಃ ರೋಗಿಯೂ ಆಗಿದ್ದುದರಿಂದ ಚೇತರಿಕೆಯ ದೀರ್ಘಾವಧಿಯ ಜೊತೆಗೆ ನನ್ನನ್ನು ಬೇರೆ ನೋಡಿಕೊಳ್ಳಬೇಕಾಗಿತ್ತು".

ಮೂತ್ರಪಿಂಡ ಪೋಷಣಾ ಪ್ರತಿಷ್ಠಾನವನ್ನು ನೋಂದಾಯಿಸುವ ಹಾಗೂ ಅದನ್ನು ನೊಂದಾಯಿಸುವ ಪ್ರಕ್ರಿಯೆಯಲ್ಲಿರುವ ಶರ್ಮಾ ಅವರು ಮೂತ್ರಪಿಂಡ ಪಡೆದು ಕೊಳ್ಳುವವರು ಹಾಗೂ ದಾನಿಗಳಿಬ್ಬರಿಗೂ ಸಲಹೆ ಹಾಗೂ ಇತರ ಬೆಂಬಲ ಸೇವೆಗಳನ್ನು ನೀಡಲು ಮುಂದಾಗಿದ್ದಾರೆ.

"ಶೀರಾ ಕಾಯಿಲೆಯಲ್ಲಿರುವ ವ್ಯಕ್ತಿಯನ್ನು ನೋಡಿ

ಕೊಳ್ಳುವುದರಲ್ಲೇ ಹಣ್ಣಾಗಿರುವ ವ್ಯಕ್ತಿಯಿಂದ ಶಸ್ತ್ರಕ್ರಿಯೆಯ ನಂತರದ ಔಷಧ ಹಾಗೂ ರಕ್ತ ನೀಡಿಕೆಯ ಖರ್ಚುವೆಚ್ಚಗಳನ್ನೂ ನೋಡಿಕೊಳ್ಳುವುದು ಕಷ್ಟದ ಸಂಗತಿ. ಈ ಬಗೆಯ ಕಷ್ಟಗಳನ್ನು ನಾವೇ ಸ್ವತಃ ಅನುಭವಿಸಿರುವುದರಿಂಧ ಬೇರೆಯವರಿಗೆ ಇದು ಆದಷ್ಟು ಸುಗಮವಾಗಿ ಇರಬೇಕು ಎಂಬುದು ನಮ್ಮ ಬಯಕೆ" ಎನ್ನುತ್ತಾರೆ ಶರ್ಮಾ.

"ಸತತ ಹಣಕಾಸಿನ ಬಿಕ್ಕಟ್ಟು ನಿಮ್ಮನ್ನು ದಿನಾ ಕೊಲ್ಲುವಂತಹದ್ದು" ಎನ್ನುತ್ತಾರೆ ಕಳೆದ ಒಂದು ವರ್ಷದಿಂದಲೂ ಮೂತ್ರಪಿಂಡ ವೈಫಲ್ಯದಿಂದ ನರಳುತ್ತಿದ್ದು ಈಗ ಬದಲೀ ಮೂತ್ರಪಿಂಡ ಜೋಡಣೆ ಅಗತ್ಯವಿರುವಂತಹ ೫೫ ವರ್ಷಗಳ ತಾಯಿಯನ್ನು ಹೊಂದಿರುವಂತಹ ೨೭ ವರ್ಷದ ಅದಿತಿ ವಸಿಷ್ಠ್.

ಈಗ ವಸಿಷ್ಠಳ ಮುಂದಿರುವ ಪಕ್ಕಾ ಪರಿಹಾರವೆಂದರೆ - ತನ್ನದೇ ಒಂದು ಮೂತ್ರಪಿಂಡದ ದಾನ. "ನನ್ನದೇ ದೇಹದ ಒಂದು ಭಾಗವನ್ನು ದಾನ ನೀಡುವ ವಿಚಾರವನ್ನು ಒಪ್ಪಿಕೊಳ್ಳಲು ಸ್ವಲ್ಪ ಕಾಲ ಬೇಕಾಯಿತು. ಆದರೆ ಇದು ಆಕೆಯ ಬದುಕನ್ನು ಉಳಿಸುತ್ತದೆ ಎಂಬುದು ನನಗೆ ಧೈರ್ಯ ನೀಡುತ್ತದೆ" ಎಂದೂ ಆಕೆ ಹೇಳುತ್ತಾರೆ.

ಆದರೆ ಈ ವಿಚಾರಕ್ಕೆ ಆಕೆಯ ತಾಯಿ ಮತ್ತು ಆಕೆಯ ಕುಟುಂಬದ ಇತರ ಸದಸ್ಯರ ತೀವ್ರ ವಿರೋಧವಿದೆ. ಯಾಕೆಂದರೆ ಇದು ಆಕೆಯ ವಿವಾಹದ ಅವಕಾಶಗಳನ್ನು ಕೆಡಿಸುತ್ತದೆ ಎಂಬುದು ಅವರ ಭಾವನೆ. ಈ ಯುವತಿ ತನ್ನ ಬದುಕಿನ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳುವಂತಹವಳು ಎಬುದನ್ನು ವೈದ್ಯರೂ ಒಪ್ಪುವುದಿಲ್ಲ. "ನಾನೇನಾದರೂ ವಿವಾಹಿತೆಯಾಗಿದ್ದರೆ ನನ್ನ ಪತಿಯನ್ನು ಕೇಳಿ ಆತನ ಆಕ್ಷೇಪಗಳೇನೂ ಇದ್ದಿರದಿದ್ದಲ್ಲಿ ಮುಂದುವರಿಯುತ್ತಿದ್ದರು. ಈ ನಿರ್ಧಾರ ನಾನೇ ಸ್ವತಃ ಮಾಡುವಂತಹದ್ದಲ್ಲ ಎಂದೇ ಎಲ್ಲರೂ ಭಾವಿಸುವಂತಿದೆ"ಎಂದು ವಸಿಷ್ಠ್ ಹೇಳುತ್ತಾರೆ.

ವಸಿಷ್ಠ್‌ಳ ತಾಯಿಯಂತಹ ರೋಗಿಗಳಿಗೆ ಇರುವ ದಾರಿಯಾದರೂ ಯಾವುದು? ೧೯೯೪ರ ಮಾನವ ಅಂಗಾಂಗ ಜೋಡಣೆಯ ಕಾಯಿದೆ, ವಾಣಿಜ್ಯ ಅಂಗ ವ್ಯಾಪಾರವನ್ನು ಶಾಸನಾತ್ಮಕವಾಗಿ ನಿಷೇಧಿಸಿದ್ದರೂ, ಒಳಗೊಳಗೇ ನಡೆಯುತ್ತಿದೆ ಎಂಬುದು ನೊಯ್‌ಡಾ ಮೆಡಿಕೇರ್ ಕೇಂದ್ರದಲ್ಲಿ ಇತ್ತೀಚೆಗೆ ಪತ್ತೆಯಾಗಿರುವ ಮೂತ್ರಪಿಂಡ ಮಾರಾಟ ಜಾಲದಿಂದ ವ್ಯಕ್ತವಾಗಿದೆ. ಆದರೆ ಕಾಳಸಂತೆಯಲ್ಲಿ ಮೂತ್ರಪಿಂಡದ ಬೆಲೆ ದುಬಾರಿ ಆಗಿರುವುದರಿಂದ ಇದು ಎಲ್ಲರಿಗೂ ನಿಲುಕುವುದಿಲ್ಲ.

ಅಂಗದಾನ ಮಾಡುವುದನ್ನು ಹತ್ತಿರದ ಸಂಬಂಧಿಗಳಿಗೆ ಮಾತ್ರವೇ ಈ ಕಾಯಿದೆ ಸೀಮಿತಗೊಳಿಸಿರುವುದರಿಂದ, ಕುಟುಂಬದಲ್ಲಿ ಹೊಂದುವಂತಹ ಮೂತ್ರಪಿಂಡ ಇರುವ ದಾನಿಗಳು ಸಿಕ್ಕದಿದ್ದಲ್ಲಿ ಮತ್ತೊಂದು ಶಾಸನಾತ್ಮಕ ಪರ್ಯಾಯವೆಂದರೆ ಮಿದುಳು ಸತ್ತಿರುವ ರೋಗಿಗಳ ಅಂಗ ಜೋಡಣೆ (ಕೆಡಾವಾರ್ ಟ್ರಿನ್ಸ್‌ಪ್ಲಾಂಟ್). ಆದರೆ ಈ ಬಗೆಯ 'ಕೆಡಾವರ್ ಟ್ರಾನ್ಸ್‌ಪ್ಲಾಂಟ್'ಗೆ ಕಾದಿರುವವರ ಪಟ್ಟಿ ತುಂಬಾ ಉದ್ದವಿದೆ.

ದೆಹಲಿಯ ಪ್ರಮುಖ ಆಸ್ಪತ್ರೆ ಎಐಐಎಂಎಸ್‌ನಲ್ಲಿ ಇದು ಹಲವು ತಿಂಗಳಾಗಬಹುದು ಅಥವಾ ಹಲವು ವರ್ಷಗಳೇ ಆಗಬಹುದು. ದುಬಾರಿಯಾದ, ನೋವಿನಿಂದ ಕೂಡಿದ ಡಯಾಲಿಸಿಸ್ ಚಿಕಿತ್ಸೆಗೆ ಒಳಗಾಗುತ್ತಾ ಬದುಕಿಗಾಗಿ ಸೆಣಸುತ್ತಿರುವ ರೋಗಿಗಳಿಗೆ ಇದು ಮುಗಿಯದ ಕಥೆ ಎನಿಸಬಹುದು.

"ಕೆಡಾವರ್ ಟ್ರಾನ್ಸ್‌ಪ್ಲಾಂಟ್'ಗಳ ಕೊರತೆಗೆ ನಮ್ಮಲ್ಲಿರುವ ಸಾಮಾಜಿಕ ನಂಬಿಕೆಗಳೂ ಕಾಣಿಕೆ ಸಲ್ಲಿಸಿವೆ ಎನ್ನುತ್ತಾರೆ ಡಾ. ದಶ್. ಭಾವನಾತ್ಮಕತೆ ಹಾಗೂ ಹೆಣದ 'ಅಂಗಚ್ಛೇದ'ದ ಬಗ್ಗೆಗೆ ಇರುವ ಮೂಢನಂಬಿಕೆಗಳು ತೊಡಕಾಗಿ ಪರಿಣಮಿಸುತ್ತವೆ.

ಸತ್ತನಂತರ ಅಂಗಾಂಗಗಳನ್ನು ದಾನ ಮಾಡಲು ಅನೇಕರು ಬಯಸಿದ್ದರೂ, ದೇಹ, ಸತ್ತ ನಂತರ ಅವರ ಸಂಬಂಧಿಗಳಿಗೆ ಕಾನೂನುಬದ್ಧವಾಗಿ ಸೇರುತ್ತದೆ. ಅವರು ಅಂಗಚ್ಛೇದಕ್ಕೆ ಒಪ್ಪುವುದು ಕಷ್ಟ. ಈ ಸಮಸ್ಯೆ ನಿವಾರಣೆಗಾಗಿ, ಅಧಿಕೃತ ದಾನಿ ಕಾರ್ಡ್‌ನಲ್ಲಿ ಇಬ್ಬರು ಸಾಕ್ಷಿಗಳ ಸಹಿ ಹಾಕಬೇಕು ಎಂದು ಇತ್ತೀಚೆಗೆ ಕಡ್ಡಾಯ ಮಾಡಲಾಗಿದೆ.

ಪತಿ ಅಥವಾ ಪತ್ನಿಯಿಂದ ಮೂತ್ರಪಿಂಡ ದಾನಕ್ಕೆ ಕಾಯಿದೆಯಲ್ಲಿ ಅವಕಾಶ ಇದ್ದರೂ, ತಜ್ಞರು ಇದಕ್ಕೆ ವಿರೋಧವಾಗಿದ್ದಾರೆ. ಪತಿಯ ಕರ್ತವ್ಯಗಳ ಪೂರೈಕೆಗಾಗಿ ಬಹುತೇಕ ಪತ್ನಿಯರು ತಮ್ಮ ಪತಿಯಂದಿರಿಗೆ ಮೂತ್ರಪಿಂಡ ದಾನ ಮಾಡುತ್ತಾರೆ. ಆದರೆ ನರಳುತ್ತಿರುವ ತನ್ನ ಪತ್ನಿಗಾಗಿ ತನ್ನ ಒಂದು ಮೂತ್ರಪಿಂಡ ದಾನ ಮಾಡಲು ಪತಿಯಂದಿರು ಮುಂದೆ ಬರುವುದು ತೀರಾ ಅಪರೂಪ ಎನ್ನುತ್ತಾರೆ ದಶ್.

"ಸಾಮಾನ್ಯವಾಗಿ ಮೂತ್ರಪಿಂಡ ದಾನಿಗಳೆಂದು ಪತ್ನಿಯರನ್ನು ಕರೆತರುವ ಪುರುಷರಿಗೆ, ತಮ್ಮದೇ ಕುಟುಂಬದಿಂದ ಬೇರೆ ಇನ್ನಾರನ್ನಾದರೂ ಕರೆ ತರಬೇಕೆಂದು ಹೇಳಿ ಕಳಿಸುತ್ತೇವೆ" ಎಂದೂ ದಶ್ ಹೇಳುತ್ತಾರೆ.

ಸೋಂಕು ರಕ್ಷಾ ಶಾಸ್ತ್ರದ ದೃಷ್ಟಿಯಿಂದ, ಪತ್ನಿ ಅಥವಾ ಪತಿಯ ಅಂಗಾಂಗ ಜೋಡಣೆ ಪ್ರಶಸ್ತವಾದ ವಿಚಾರವಲ್ಲ. ಅಂಗಾಂಶ ಹೊಂದಾಣಿಕೆ ಸಮಸ್ಯೆ ಇದ್ದೇ ಇರುತ್ತದೆ. ಈ ರೀತಿಯ ದಾನ ಪಡೆದುಕೊಂಡ ವ್ಯಕ್ತಿ ಸೈಕ್ಲೊಸ್ಪೋರಿನ್‌ನಂತಹ ದುಬಾರಿ ಸೋಂಕು ನಿರೋಧಕಗಳ ಮೇಲೆ ಪ್ರತಿ ತಿಂಗಳೂ ಅಪಾರ ಹಣ ವ್ಯಯ ಮಾಡಬೇಕಾಗುತ್ತದೆ. ಆದರೂ, ಹೆಚ್ಚಿನವರು ತಮ್ಮ ಪತ್ನಿಯ ಮೂತ್ರಪಿಂಡ ದಾನ ಪಡೆಯುವುದನ್ನೇ ಬಯಸುತ್ತಾರೆ.

ಇಂತಹ ಪ್ರವೃತ್ತಿಗಳನ್ನು ಎದುರಿಸುವುದಕ್ಕಾಗಿಯೇ, ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ ೧೯೯೭ರಲ್ಲಿ ನೀತಿ ಮಾರ್ಗಸೂಚಿಗಳನ್ನು ಕುರಿತಂತಹ ಕರಡು ಪ್ರತಿಯನ್ನು ಸಿದ್ಧಪಡಿಸಿತು. ಸಂಬಂಧಿತ ದಾನಿಗಳ ವರ್ಗದಿಂದ ಪತ್ನಿ ಅಥವಾ ಪತಿಯನ್ನು ತೆಗೆದುಹಾಕಲು ಅದು ಶಿಫಾರಸು ಮಾಡಿದೆ. "ಏಕೆಂದರೆ ಬಾಳಸಂಗಾತಿ ಹಾಗೂ ಮೂತ್ರಪಿಂಡ ಪಡೆದುಕೊಳ್ಳುವ ರೋಗಿಯ ಮಧ್ಯೆ ಯಾವುದೇ ಜೈವಿಕ ಸರಿಸಮಾನ ಅಂಶಗಳು ಇರುವುದಿಲ್ಲ".

ಮೂತ್ರಪಿಂಡ ದಾನ ಮಾಡುವುದರಲ್ಲಿ ಮಹಿಳೆಯರೇ ಮೊದಲಿಗರಾಗಿದ್ದರೂ, ಮಹಿಳೆಯರು ತಾವೇ ನೋವುಣ್ಣುತ್ತಿರುವಾಗ ಅವರಿಗೆ ದಾನಿಗಳು ಸಿಗುವುದು ತುಂಬಾ ಕಷ್ಟ. ಅದರಲ್ಲೂ ವಯಸ್ಸಾಗಿರುವ ಮಹಿಳೆಯರಿಗಂತೂ ಇದು ಅಸಾಧ್ಯದ ಮಾತೇ.

ಪರಿಸರ ಸಂಬಂಧಿ ವಿಚಾರಗಳ ಸಂಶೋಧಕಿ ಹಾಗೂ ಲೇಖಕಿ ಶುಕ್ಲಾ ಬಸು ಅವರು ೧೯೯೦ರಲ್ಲಿ ತಮ್ಮ ತಾಯಿಗೆ ಮೂತ್ರಪಿಂಡ ದಾನ ಮಾಡಿದಾಗ ಆಕೆಯ ವಯಸ್ಸು ೩೪ ಆಗಿತ್ತು. ಆಗ ಮೂತ್ರಪಿಂಡ 'ಖರೀದಿ' ಇನ್ನು ಬಹಿಷ್ಕೃತವಾಗಿರಲಿಲ್ಲ. ಹೀಗಿದ್ದೂ ಇದು ಸ್ವಯಂ ದಾನಿಯ ಮೂತ್ರಪಿಂಡವೇ ಆಗಬೇಕೆಂದು ಆಕೆ ಬಯಸಿದರು. ಕುಟುಂಬದ ಇತರ ಪುರುಷ ಸದಸ್ಯರಾರೂ ಮೂತ್ರಪಿಂಡ ದಾನಕ್ಕೆ ಮುಂದೆ ಬರಲಿಲ್ಲ. ಆಕೆಯ ಅಕ್ಕ ಸಂಪ್ರದಾಯಶೀಲ ಕುಟುಂಬಕ್ಕೆ ವಿವಾಹ ಆಗಿದ್ದುದರಿಂದ ಆಕೆಯ ಅತ್ತೆ - ಮಾವಂದಿರ ಪ್ರತಿರೋಧ ಎದುರಿಸಿದ್ದಿರಬಹುದು ಎಂದು ಆಕೆ ವಿಶ್ಲೇಷಿಸುತ್ತಾರೆ.

ಮಕ್ಕಳು ಬೇಡ ಎಂದು ಬಸು ನಿರ್ಧರಿಸಿದ್ದರಿಂದ ಹಾಗೂ ಆಕೆಯ ಅಸಾಂಪ್ರದಾಯಿಕ ಬದುಕಿನ ಶೈಲಿ ಆಕೆಯ ನಿರ್ಧಾರವನ್ನು ಸ್ವಲ್ಪಮಟ್ಟಿಗೆ ಎಲ್ಲರೂ ಒಪ್ಪಿಕೊಳ್ಳುವಂತಾಯಿತು. ಆದರೆ ಮಗಳ ಮೂತ್ರಪಿಂಡ ಪಡೆಯಲು ತನ್ನ ಅತ್ತೆಯನ್ನು ಒಪ್ಪಿಸುವಲ್ಲಿ ಸಫಲನಾದ ಬಸುವಿನ ಪತಿ ಮಾತ್ರ 'ಹೀರೊ' ಸ್ಥಾನಮಾನ ಗಳಿಸಿದ್ದು ಇಲ್ಲಿನ ವ್ಯಂಗ್ಯ. ಪತ್ನಿಯ ಮೂತ್ರಪಿಂಡ ದಾನಕ್ಕೆ 'ಅನುಮತಿ' ನೀಡಿದ್ದಕ್ಕಾಗಿ ಆತನಿಗೆ ಈ ಸ್ಥಾನ ದೊರಕಿತ್ತು.

"ನನ್ನ ಉದಾರಿ ಗಂಡ ಇದಕ್ಕೆ ಅವಕಾಶ ನೀಡಿದ್ದಾನೆಂದು ಹಾಗೂ ಇದನ್ನು ನನ್ನ ನಿರ್ಧಾರವೆಂದು ಕಾಣದೇ ಇದ್ದುದರಿಂದ ನನಗೆ ನಿಜವಾಗಿಯೂ ಕಿರಿಕಿರಿಯಾಗಿತ್ತು" ಎಂದೂ ಬಸು ಕಹಿಯಾಗಿ ನುಡಿಯುತ್ತಾರೆ.

ಇದು ಮಾತ್ರವಲ್ಲ, ತನ್ನದೇ ಸ್ವಂತ ಮಗಳಿಂದ ಮೂತ್ರಪಿಂಡ ಪಡೆದುಕೊಂಡ ಆಕೆಯ ತಾಯಿಯನ್ನು ಸ್ವಾರ್ಥಿ ಎಂಬ ಭಾವನೆ ಆಕೆಯ ತಾಯಿಗೆ ಬೆಳೆಯುವಂತೆಯೇ ಎಲ್ಲರೂ ವರ್ತಿಸಿದರು.

"ಆ ಸಂದರ್ಭದಲ್ಲಿ ಆಕೆ ತೀವ್ರತರ ಭಾವನಾತ್ಮಕ ಹಾಗೂ ಮಾನಸಿಕ ಸಂಘರ್ಷ ಅನುಭವಿಸಬೇಕಾಯಿತು. ನನ್ನ ತಾಯಿ ಚೇತರಿಸಿಕೊಳ್ಳಲು ಹಲವು ತಿಂಗಳುಗಳೇ ಹಿಡಿದವು" ಎಂದು ಬಸು ನುಡಿಯುತ್ತಾರೆ.

"ತಮ್ಮ ಮಕ್ಕಳಿಗೆ ಎಲ್ಲವನ್ನೂ ಮಾಡಲು ತಾಯಂದಿರು ಬಯಸುತ್ತಾರೆ. ಆದರೆ ತಮಗೆ ಮಕ್ಕಳು ಏನೂ ಮಾಡುವುದನ್ನು ತಾಯಂದಿರು ಇಷ್ಟ ಪಡುವುದಿಲ್ಲ" ಎನ್ನುತ್ತಾರೆ. ಮೂತ್ರಪಿಂಡ ಜೋಡಣೆ ಅಗತ್ಯವಿರುವ ಮಹಿಳೆಯೊಬ್ಬರ ಮಗಳು. "ತನ್ನ ಮಗಳು ನೀಡಬಹುದಾದ ಮೂತ್ರಪಿಂಡದಿಂದ ತಾನು ಬದುಕಬಲ್ಲಬಹುದು ಎಂಬ ವಿಚಾರವೇ ನನ್ನ ತಾಯಿಗೆ ಅಪಥ್ಯ. ಈ ವಿಚಾರ ಚರ್ಚಿಸಲೂ ಆಕೆ ನಿರಾಕರಿಸುತ್ತಾಳೆ" ಎಂದೂ ಈ ಮಗಳು ಹೇಳುತ್ತಾಳೆ.

ಆದರೆ, ತನ್ನ ಮಗುವಿಗೆ ಮೂತ್ರಪಿಂಡ ದಾನ ಮಾಡುವುದು ತೀರಾ ನೈಸರ್ಗಿಕವಾಗ ಕ್ರಿಯೆ ಎಂದು ಬಹುತೇಕ ತಾಯಂದಿರು ಭಾವಿಸುತ್ತಾರೆ. ತನ್ನ ಕಟ್ಟುಮಸ್ತಾದ ಮಗನನ್ನು ತೋರಿಸುತ್ತಾ ಮೂತ್ರಪಿಂಡದಾನಿ ಮೀರಾ ಹೀಗೆ ಹೇಳುತ್ತಾರೆ : "ಈ ಹುಡುಗ ಇಡೀ ದಿನ ಮಂಚದ ಮೇಲೆ ಬಿದ್ದಿರುತ್ತಿದ್ದ - ಊದಿಕೊಂಡು ಹಾಗೂ ಕಾಯಿಲೆಯಿಂದ. ಡಯಾಲಿಸಿಸ್ ಆಗಲಿ ಅಥವಾ ಆಸ್ಪತ್ರೆಯಲ್ಲಿ ಇರುವಂತಹ ವೆಚ್ಚವನ್ನಾಗಲೀ ನಾವು ಭರಿಸುವುದು ಸಾಧ್ಯ ಇರಲಿಲ್ಲ. ಆದರೆ ಈಗ ನೋಡಿ - ಮೂರು ವರ್ಷದ ಹಿಂದಿನವರೆಗೂ ಆತ ಮರಣಶಯ್ಯೆಯಲ್ಲಿದ್ದ ಎಂದು ಈಗ ಯಾರಾದರೂ ಹೇಳುವುದು ಸಾಧ್ಯವೆ? ನಾನು ಎರಡು ಬಾರಿ ಜನ್ಮ ನೀಡಿದ್ದೇನೆ ಎಂದು ಹೇಳಿಕೊಳ್ಳಲು ನನಗೇ ಹೆಮ್ಮೆಯಾಗುತ್ತದೆ - ಯಾವ ತಾಯಿಗೆ ಇದಕ್ಕಿಂತ ಇನ್ನೇನು ಬೇಕು?"

ಉರಿದು ಹೋದ ಶಾರದ

ತಾವರೆಕೆರೆಯ ರೈತ ಕುಟುಂಬದಿಂದ ಬಂದ ತರುಣಿ ಶಾರದೆ. ಆರು ಹೆಣ್ಣುಮಕ್ಕಳು ಒಬ್ಬನೇ ಮಗನಿರುವ ಕುಟುಂಬದಲ್ಲಿ ಶಾರದೆ ಎರಡನೆಯ ಮಗಳು. ಶಾರದೆ ಎಸ್. ಎಸ್. ಎಲ್. ಸಿ. ಓದು ಮುಗಿಸಿದ ಕೂಡಲೇ ಅವಳಿಗೆ ವರನನ್ನು ಹುಡುಕಲು ಹೆತ್ತವರು ತರಾತುರಿ ಮಾಡಿದರು. ಅದೇ ವೇಳೆಗೆ ಅವರ ಸಂಬಂಧಿಗಳಿಂದ ತಮ್ಮದೇ ಜಾತಿಯವನಾದ ಮುಕುಂದ ಎಂಬ ಪದವೀಧರನಿದ್ದಾನೆಂದೂ, ಆತನಿಗೂ ವಧುವಿನ ಶೋಧ ನಡೆಸಿದ್ದಾರೆಂದೂ ತಿಳಿದುಬಂತು.

ಶಾರದೆಯ ಚಿಕ್ಕಪ್ಪ ವರನ ಮನೆಯವರಿಗೆ ಈ ಸುದ್ದಿ ಮುಟ್ಟಿಸಿದಾಗ, ಒಂದೇ ಜಾತಿಯವರೂ ಆದ್ದರಿಂದ ವರನ ಕಡೆಯವರು ಕೂಡಲೇ ಇತ್ತ ಒಲವು ಹರಿಸಿದರು. ಪರಸ್ಪರ ಸಂಧಿಸಿ ಮಾತನಾಡಿದ ಹಿರಿಯರು ಮದುವೆಗೆ ಒಪ್ಪಿಕೊಂಡರು. ಎರೆಡುತಿಂಗಳ ನಂತರ ನಿಶ್ಚಿತಾರ್ಥ ಎಂದು ಗೊತ್ತು ಮಾಡಲಾಯಿತು. ಮುಕುಂದ ಆ ಮನೆಯ ಒಬ್ಬನೆ ಮಗನಾಗಿದ್ದ. ವರನ ಕಡೆಯವರು ಅದ್ದೂರಿಯಾಗಿ ಮದುವೆ ಆಗಬೇಕೆಂದರು. ಚಿನ್ನದ ಸರ, ಕೈಗಡಿಯಾರ, ಬಂಗಾರ ಇತ್ಯಾದಿ ಕೊಡಬೇಕು ಎಂದಾಗ ಶಾರದೆಯ ಮನೆಯವರು ಚಿನ್ನದ ಸರ ಕೊಡಲು ಹಿಂದು ಮುಂದೆ ನೋಡಿದರು. ಕಡೆಗೆ ಒಪ್ಪಿಗೆ ಕೊಡಬೇಕಾಯಿತು. ಒಟ್ಟಾರೆ ವರನಿಗೆ ಈ ಒಡವೆಗಳಾದರೆ ವಧು ಶಾರದೆಗೆ ಸಹ ಎರಡೆಳೆ, ಒಂದೆಳೆಯ ಚೈನುಗಳು, ಕಿವಿಯ ಓಲೆ, ಉಂಗುರ, ರೇಷ್ಮೆ ಹಾಗೂ ನೂಲಿನ ಸೀರೆಗಳು ಇತ್ಯಾದಿ ಕೊಡಬೇಕಾಯಿತು. ೧೯೮೨ನೇ ಫೆಬ್ರವರಿ ೯ನೇ ತಾರೀಖು ನೆಲಮಂಗಲದಲ್ಲಿ ಶಾರದೆಯ ಮನೆಯವರ ಖರ್ಚಿನಲ್ಲಿ ತುಂಬ ಅದ್ದೂರಿಯಾಗಿ ವಿವಾಹ ನೆರವೇರಿತು.

ಸುಮಾರು ಒಂದು ವರ್ಷದವರೆಗೆ ಶಾರದೆ-ಮುಕುಂದ ಸುಖ ಸಂತೋಷದಲ್ಲಿ ಸಂಸಾರ ಮಾಡಿದರು. ಅದು ಒಟ್ಟು ಸಂಸಾರವಾಗಿದ್ದು, ಈ ಕುಟುಂಬದ ಜೊತೆಗೆ ಮನೆಯ ಅಳಿಯಂದಿರೂ ಇದ್ದರು. ಸ್ಥಳ ಚಿಕ್ಕದಾದ್ದರಿಂದ ದೊಡ್ಡದೊಂದು ಮನೆಯನ್ನು ಕಟ್ಟಬೇಕೆಂದುಕೊಂಡ ಶಾರದೆಯ ಗಂಡ ಮುಕುಂದ. ಪೀಣ್ಯ ದಾಸರಹಳ್ಳಿಯಲ್ಲಿದ್ದ ಅವರದೇ ನಿವೇಶನದಲ್ಲಿ ಮನೆ ಕಟ್ಟಲು ನಿರ್ಧರಿಸಿದ. ತನ್ನ ಮದುವೆಯಲ್ಲಿ ವರದಕ್ಷಿಣೆ ಪಡೆದಿಲ್ಲವಾದ್ದರಿಂದ ಈ ಮನೆಕಟ್ಟುವ ಸಮಯದಲ್ಲಿ ಶಾರದೆ ತವರುಮನೆಯಿಂದ ಕನಿಷ್ಟ ಐವತ್ತು ಸಾವಿರ (೫೦,೦೦೦ ರೂ.) ವನ್ನಾದರೂ ತರಬೇಕೆಂದು ಮುಕುಂದ ತಾಕೀತು ಮಾಡಿದ.

ಶಾರದೆ ಗಂಡನ ಈ ಬೇಡಿಕೆಯನ್ನು ಸಂಕೋಚದಿಂದಲೇ ತನ್ನ ಹೆತ್ತವರಿಗೆ ತಿಳಿಸಿದಳು. ಶಾರದೆಯ ತಂದೆ "ಇನ್ನು ನಾಲ್ಕು ಹೆಣ್ಣು ಮಕ್ಕಳ ಮದುವೆ ಮಾಡಬೇಕಿದೆ. ಶಾರದೆಯ ಮದುವೆಗೆ ತುಂಬಾ ಧಾರಾಳವಾಗಿ ಖರ್ಚು ಮಾಡಿದ್ದಾಗಿದೆ. ಆದ್ದರಿಂದ ಈಗ ಹಣ ಕೊಡುವುದು ಸಾಧ್ಯವಿಲ್ಲ" ಎಂದರು. ಶಾರದೆ ಈ ನಕಾರಾತ್ಮಕ ಉತ್ತರವನ್ನು ಕೊಂಡೊಯ್ದಾಗಲೂ ಮುಕುಂದ ತನ್ನ ಪ್ರಯತ್ನ ನಿಲ್ಲಿಸಲಿಲ್ಲ. 'ಸದ್ಯಕ್ಕೆ ನಿನ್ನ ತಂದೆ ಈ ಹಣವನ್ನು ಸಾಲವಾಗಿ ಕೊಟ್ಟಿರಲಿ. ಆನಂತರ ಹಿಂತಿರುಗಿಸಿದರಾಯಿತು' ಎಂದ. ಶಾರದೆಯ ತಂದೆ ಈ ಮಾತಿಗೆ ಒಪ್ಪಿ ಹಣ ಕೊಟ್ಟರು. ಆದರೆ ಅಳಿಯನಿಂದ ಒಂದು ಪೈಸೆಯೂ ಹಿಂದಕ್ಕೆ ಬರಲಿಲ್ಲ. ಶಾರದೆಯ ಮೈಮೇಲಿದ್ದ ಒಡವೆಗಳನ್ನು ಅಡವಿಟ್ಟು, ಮನೆ ಕಟ್ಟಿದರು.

ಶಾರದೆಗೆ ತನ್ನ ಮುದವೆಯಾಗಿ ಒಂದು ವರ್ಷದ ನಂತರ ಹೀಗೆ ಗಂಡನ ಮನೆಯವರಿಂದ, ಗಂಡನಿಂದ ಹಿಂಸೆ ಪ್ರಾರಂಭವಾಯಿತು. ಆಕೆಯ ಮೂವರು ನಾದಿನಿಯರೂ ಆಕೆಯನ್ನು ಮನೆಗೆಲಸದಿಂದ ಹಿಡಿದು ಆಕೆಯ ಉಡು-ತೊಡುವ ಹವ್ಯಾಸದವರೆಗೆ ಎಲ್ಲಕ್ಕೂ ಹಂಗಿಸತೊಡಗಿದರು. ಶಾರದೆಗೆ ತವರುಮನೆಯವರು ಮದುವೆಯಲ್ಲಿ ಕೊಟ್ಟಿದ್ದ ಸೀರೆಗಳನ್ನು ಈ ನಾದಿನಿಯರೇ ತೆಗೆದುಕೊಂಡರು. ಈ ಬಗ್ಗೆ ಶಾರದೆ ಗಂಡ ಮುಕುಂದನ ಬಳಿ ಹೇಳಿಕೊಂಡಾಗಲೂ ಆತ ಅಕ್ಕ-ತಂಗಿಯರನ್ನೇ ಸಮರ್ಥಿಸಿಕೊಂಡ. ಶಾರದೆ ಅತ್ತಿಗೆ-ನಾದಿನಿಯರನ್ನು ಆಕ್ಷೇಪಿಸಿದಾಗ, ಅವರಿಗೆ ತನ್ನ ಸೀರೆ ಒಡವೆ ಕೊಡಲು ನಿರಾಕರಿಸಿದಾಗ ಅವರೆದುರೇ ತೀರಾ ಅಪಮಾನಕರ ರೀತಿಯಲ್ಲಿ ಜರಿದು ಮಾತಾಡಿದ, ಒಮ್ಮೊಮ್ಮೆ ಆಕೆಗೆ ಪೆಟ್ಟೂ ಕೊಟ್ಟ ಮುಕುಂದ. ಪ್ರಾರಂಭದಲ್ಲಿ ಆಗ-ಈಗ ಸಂಭವಿಸುತ್ತಿದ್ದ ಕೌಟುಂಬಿಕ ಕಲಹಗಳು ದಿನನಿತ್ಯ ನಡೆಯ ತೊಡಗಿದವು. ಇಂಥ ಪೂರ್ವನಿಯೋಜಿತ ಅನಿಸುವಂಥ ಕೌಟುಂಬಿಕ ಜಗಳ ಒಂದು ದಿನ ಹಿಂಸೆಗೂ ತಿರುಗಿತು. ಮುಕುಂದನ ತಾಯಿ ಸೊಸೆ ಶಾರದೆಯನ್ನು ಮನೆಯಿಂದ ಹೊರ ಹಾಕಿದಳು. ಶಾರದೆ ತಾಯಿಯ ಮನೆಗೆ ಬಂದಳು. ಎರಡು ತಿಂಗಳು ಅಲ್ಲೇ ಕಳೆದವು. ಶಾರದೆಯ ತಾಯಿ ತಂದೆಯರು ಮುಕುಂದನಿಗೆ ನಿನ್ನ

ಹೆಂಡತಿಯನ್ನು ನೀನೇ ಬಂದು ಮನೆಗೆ ಕರೆದೊಯ್ಯಬೇಕು ಎಂದು ಹೇಳಿದಾಗ ಆತ ಶಾರದೆಯನ್ನು ಕರೆದೊಯ್ಯಲು ಬಂದ. ಅವರು ಹೊರಟು ನಿಂತಾಗ ಶಾರದೆಯ ತಂದೆ "ಹೆಣ್ಣು ಮಕ್ಕಳು ಗಂಡನ ಮನೆಯಲ್ಲಿ ತನ್ನ ನಾದಿನಿ-ಭಾವಂದಿರ ಜೊತೆ ಹೊಂದಿಕೊಂಡಿರಬೇಕು. ಜಗಳ ಮಾಡಿಕೊಂಡು ತವರು ಮನೆಗೆ ಬರುವುದು ಸರಿಯಲ್ಲ. ಇದರಿಂದ ಕೆಟ್ಟ ಹೆಸರು ಬರುತ್ತದೆ. ಇನ್ನೂ ನಾಲ್ಕು ಹೆಣ್ಣು ಮಕ್ಕಳು ಮದುವೆಗಿದ್ದಾರೆ. ಹೀಗೆ ನೀನು ತವರಿಗೆ ಬರುತ್ತಿದ್ದರೆ ಅವರ ಮದುವೆ ಆಗುವುದು ಕಷ್ಟ" ಎಂದು ಬುದ್ಧಿ ಹೇಳಿದರು.

ಇನ್ನೆಂದೂ ಈ ಕಷ್ಟಗಳಿಗೆ ಹೆದರದೆ ಸಹಿಸಿಕೊಳ್ಳುತ್ತೇನೆ ಎಂದುಕೊಂಡೇ ಗಂಡನ ಮನೆಗೆ ಹೊರಟಳು. ತಾವು ಪೀಣ್ಯ ದಾಸರಹಳ್ಳಿಯಲ್ಲಿ ಕಟ್ಟಿದ ಹೊಸ ಮನೆಗೆ ಹೋಗುವವರೆಗೆ ಅವರು ಕೊಟ್ಟ ಎಲ್ಲ ಕಿರುಕುಳವನ್ನು ಮೌನವಾಗಿದ್ದು ಸಹಿಸಿದಳು. ಮುಕುಂದ ಮನೆಯ ಕೆಳಗಿನ ಭಾಗವನ್ನು ಬಾಡಿಗೆಗೆ ಕೊಟ್ಟು ಮೇಲಿನ ಭಾಗದ ಒಂದು ಕೋಣೆ, ಅಡಿಗೆ ಮನೆ ಇರುವಲ್ಲಿಗೆ ಸಂಸಾರವನ್ನು ವರ್ಗಾಯಿಸಿದ. ಇನ್ನು ಈ ಮನೆಯಳಿಯಂದಿರ ಕಾಟವಿಲ್ಲದೆ ಸುಖವಾಗಿ ಇರಬಹುದೆಂಬ ಕನಸು ಕಂಡಳು ಶಾರದೆ. ಆದರೆ ಅವಳ ಮನೆಯಿಂದ ಕೆಲವೇ ಗಜಗಳ ಅಂತರದಲ್ಲಿ ಮನೆ ಮಾಡಿದ್ದ ಒಬ್ಬ ನಾದಿನಿಯಿಂದ ಆಕೆ ತಪ್ಪಿಸಿಕೊಳ್ಳುವುದು ಸಾಧ್ಯವೇ ಇರಲಿಲ್ಲ. ಆಕೆ ಯಾವಾಗೆಂದರೆ ಆವಾಗ ಬಂದು ಶಾರದೆಯನ್ನು ಹಂಗಿಸಿ ಮಾತಾಡುತ್ತಲೇ ಇದ್ದಳು. ಶಾರದೆಯ ತಂದೆ ಸಂಸಾರಕ್ಕಾಗುವ ಕೆಲವು ಪಾತ್ರೆಗಳು, ಒಂದು ಕರೆಯುವ ಹಸು, ಇತ್ಯಾದಿಗಳನ್ನು ಶಾರದೆಯ ಹೊಸ ಮನೆಗೆ ಕಳಿಸಿದ್ದರು. ಈ ಎಲ್ಲ ಉಡುಗೊರೆಯಿಂದಾದರೂ ಶಾರದೆಯನ್ನು ಸುಖವಾಗಿ ಇಟ್ಟುಕೊಳ್ಳಲಿ ಎಂಬುದು ಅವರ ಆಸೆಯಾಗಿತ್ತು. ಅದ್ಯಾವುದೂ ಆಗಲಿಲ್ಲ. ದಿನನಿತ್ಯ ಶಾರದೆಗೆ ಕಿರುಕುಳ ಹೆಚ್ಚುತ್ತಲೇ ಇತ್ತು.

ಶಾರದೆಯ ತಂಗಿಗೆ ಮದುವೆ ಗೊತ್ತಾಯಿತು. ವರನ ಬೇಡಿಕೆಯಂತೆ ಆತನಿಗೆ ಒಂದು ಸ್ಕೂಟರ್ ತೆಗೆದುಕೊಟ್ಟಿದ್ದರು. ಶಾರದೆಯ ಗಂಡ ಮುಕುಂದ ತನಗೂ ಸ್ಕೂಟರ್ ಬೇಕೆಂದು ಬೇಡಿದ. ಶಾರದೆಯ ತಂದೆ 'ಇಲ್ಲ' ಅನ್ನಲಿಲ್ಲ. ಕೊಂಚ ಕಾಲ ಕಳೆದ ಮೇಲೆ ತೆಗೆದುಕೊಡುತ್ತೇನೆ ಎಂದರು.

ಶಾರದೆಯ ವೈವಾಹಿಕ ಜೀವನ ಮತ್ತೂ ಕಹಿಯಾಗುತ್ತಲೇ ಸಾಗಿತ್ತು. ಹಬ್ಬದ ಸಲುವಾಗಿ ಶಾರದೆಯ ಗಂಡ ಮುಕುಂದ ಎಲ್ಲರಿಗೂ ಸೀರೆಗಳನ್ನು ತಂದ. ಅವನ ನಾಲ್ವರು ಅಕ್ಕ-ತಂಗಿಯರು, ತಾಯಿ ಬೇಕಾದ್ದನ್ನೆಲ್ಲ ಆಯ್ದುಕೊಂಡರು. ಶಾರದೆಗೆ ಇದು ಬೇಕೇ ಚೆನ್ನಾಗಿದೆಯೇ ಎಂದೂ ಕೇಳದೆ ಅವರೆಲ್ಲಾ ಆರಿಸಿ ಉಳಿದ ಸೀರೆ ಕೊಟ್ಟರು. ಆಗಲೂ ಒಳಗೆ ನೊಂದುಕೊಂಡು ತುಟಿ ಎರಡು ಮಾತಾಡದೆ ಕೊಟ್ಟಿದ್ದನ್ನೇ ತೆಗೆದುಕೊಂಡಳು ಶಾರದೆ. ಆದರೆ ಅವಳ ಮನಸ್ಸಿಗಾದ ಈ ಗಾಯ ಸಾಲದು ಎಂಬಂತೆ ಮರುದಿನ ನಾದಿನಿಯೊಬ್ಬಳು ಶಾರದೆಯ ಪಾಲಿನ ಸೀರೆಯನ್ನು ಕೇಳಿದಳು. ಶಾರದೆ ಕೊಡಲು ನಿರಾಕರಿಸಿದಳು. ಮಾತು ಬೈಗುಳಗಳು ಸಾಗಿದ್ದವು. ಒಂದು ಹಂತದಲ್ಲಿ ಆ ನಾದಿನಿಯ ಗಂಡ ಶಾರದೆಯ ಕಪಾಳಕ್ಕೆ ಹೊಡೆದುಬಿಟ್ಟ. ಶಾರದೆ ಅಪಮಾನ-ಸಿಟ್ಟುಗಳಿಂದಾಗಿ ಸ್ಥಿಮಿತ ಕಳೆದುಕೊಂಡಳು. ಆ ವ್ಯಕ್ತಿಯ ಎಲ್ಲ ಕೆಟ್ಟ ಚಟಗಳು, ಸಮಾಜ ಬಾಹಿರ ಕೃತ್ಯಗಳ ಬಗ್ಗೆ ತನಗೆ ತಿಳಿದಿದ್ದ ಅನೇಕ ವಿಷಯಗಳನ್ನು ಅವನ ಹೆಂಡತಿಯ ಎದುರೆ ಹೇಳಿ ನಿಂದಿಸಿದಳು. ಸಿಟ್ಟಿಗೆದ್ದ ಆತ ಆಕೆಯನ್ನು ಮತ್ತಷ್ಟು ಹಿಂಸಿಸಿದ ಮತ್ತು ಆಕೆಯನ್ನು ಕೊಂದೇ ಹಾಕುತ್ತೇನೆಂದು ಕಿರುಚಿದ. ಶಾರದೆ ಮತ್ತವಳ ಮಕ್ಕಳನ್ನು ಮನೆಯಿಂದ ಹೊರಗೆ ಹಾಕಿ ಒಳಗಿನಿಂದ ಬಾಗಿಲು ಹಾಕಿಕೊಂಡುಬಿಟ್ಟರು.

ಶಾರದೆಯ ಮನೆಗೆ ಬಂದಿದ್ದ ಆಕೆಯ ತಂಗಿಯೂ ಆಗ ಜೊತೆಗಿದ್ದಳು. ಶಾರದೆ, ಮಕ್ಕಳು - ತಂಗಿಯನ್ನು ಕರೆದುಕೊಂಡು ತವರು ಮನೆಗೆ ಬಂದಳು. ಆದರೆ ತಂದೆ ಹೇಳಿದ್ದ ಬುದ್ಧಿಮಾತನ್ನು ನೆನೆದು ಶಾರದೆ ತಂಗಿ, ಮಕ್ಕಳಲ್ಲಿ ಯಾವ ಕಾರಣಕ್ಕೂ ತನ್ನ ಮನೆಯಲ್ಲಿ ನಡೆದ ಈ ಕಹಿ ಪ್ರಸಂಗವನ್ನು ಅಪ್ಪ-ಅಮ್ಮಂದಿರಿಗೆ ಹೇಳಬೇಡಿ ಎಂದು ಬೇಡಿಕೊಂಡಳು. ಒಂದು ರಾತ್ರಿ ತವರಿನಲ್ಲಿ ಕಳೆದು ಮರುದಿನ ಪುನಃ ಗಂಡನ ಮನೆಗೆ ಹೊರಟು ಬಂದಳು ಶಾರದೆ. ಹಬ್ಬ ಮುಗಿಸಿಕೊಂಡು ಗಂಡನ ಒತ್ತಾಯದ ಕಾರಣ ಮತ್ತೆ ತವರಿಗೆ ಬಂದಳು. ಅವಳು ಗಂಡನಿಗಾಗಿ ಸ್ಕೂಟರ್ ಕೊಡಿಸಿ ಎಂದು ಕೇಳಬೇಕಾಗಿ ಬಂದಿತ್ತು. ಇನ್ನು ಕೊಂಚ ಕಾಲಾವಕಾಶ ಕೋರಿದ ತಂದೆ ಆಕೆಯನ್ನು ಗಂಡನ ಮನೆಗೆ ಕಳಿಸಿದರು.

ಇದಾದ ೮-೧೦ ದಿನಗಳ ನಂತರ ಬೆಳಗಿನ ಹತ್ತೂವರೆಯ ಸಮಯಕ್ಕೆ ಶಾರದೆಯ ತಂದೆಗೆ ದೂರವಾಣಿ ಕರೆ ಬರುತ್ತದೆ. 'ಅಡುಗೆಯ ಸ್ಟೌವ್ ಸಿಡಿದು ಶಾರದೆಗೆ ಸುಟ್ಟುಗಾಯಗಳಾಗಿವೆ. ತುಂಬಾ ಗಂಭೀರವಾದ ಸ್ಥಿತಿಯಲ್ಲಿದ್ದಾಳೆ. ಆಕೆ ಮನೆಯಾಚೆ ಬಾಗಿಲಿಂದ ಹೊರಗೆ ಬಿದ್ದಿದ್ದಾಳೆ' ಎಂದು ಹೇಳಿತು ಆ ಧ್ವನಿ. ಆ ವ್ಯಕ್ತಿ ತನ್ನ ಹೆಸರನ್ನು ಹೇಳಲಿಲ್ಲ. ಸುದ್ದಿ ಕೇಳಿದ ಕೂಡಲೇ ಶಾರದೆಯ ಅಕ್ಕ ತನ್ನ ಗಂಡನೊಡನೆ ಶಾರದೆಯ ಮನೆಯ ಕಡೆ ಹೊರಟರು. ಆಶ್ಚರ್ಯಕರ ರೀತಿಯಲ್ಲಿ ಶಾರದೆ ಬಾಗಿಲ ಮುಂದೆ ಶವವಾಗಿ ಬಿದ್ದಿದ್ದಳು. ಅವಳ ಮೈಯೆಲ್ಲ ಸುಟ್ಟ ಗಾಯಗಳಿಂದ ತುಂಬಿತ್ತು. ಆಕೆಯ ತಲೆಗೆ ಭಾರೀ ಪೆಟ್ಟಾಗಿತ್ತು. ರಕ್ತ ಸುರಿದು ಗಟ್ಟಿಯಾದ ಕಲೆಗಳಿದ್ದವು. ಸೀಮೆಎಣ್ಣೆ, ಪೆಟ್ರೋಲುಗಳ ಘಾಟಾದ ವಾಸನೆ ಸುತ್ತಲೂ ಹಬ್ಬಿತ್ತು. ಶಾರದೆಯ ಮಕ್ಕಳಿಬ್ಬರೂ ಕೆಳಗಡೆ ಮನೆಯಲ್ಲಿ ಬಾಡಿಗೆಗೆ ಇದ್ದವರ ಬಳಿ

ಇದ್ದವು. ಶಾರದೆಯ ಗಂಡ ಅವರಿಬ್ಬರನ್ನು ಅಲ್ಲಿ ಬಿಟ್ಟು ಹೊರಟು ಹೋಗಿದ್ದನಂತೆ.

ಇವೆಲ್ಲವನ್ನು ಗಮನಿಸಿದ ಮೇಲೆ ಇದು ಸಾಮಾನ್ಯವಾಗಿ ಸ್ಟೌವ್ ಸಿಡಿದ ಘಟನೆ ಅಲ್ಲ ಎಂದು ಗ್ರಹಿಸಿದ ಶಾರದೆಯ ಅಕ್ಕ-ಭಾವ ಕೂಡಲೇ ಪೊಲೀಸಿಗೆ ದೂರು ಕೊಟ್ಟರು. ಪೊಲೀಸರು ಬಂದು ಸ್ಥಳವನ್ನು ಪರಿಶೀಲಿಸಿ, ದೂರನ್ನು ದಾಖಲಿಸಿಕೊಂಡರು. ಶಾರದೆಯ ದೇಹವನ್ನು ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರಕ್ಕೆ ಕೊಂಡೊಯ್ಯಲಾಯಿತು.

ಮರುದಿನ ಬೆಳಿಗ್ಗೆ ಮಕ್ಕಳನ್ನು ಏನು ನಡೆಯಿತು ಎಂದು ಕೇಳಲಾಗಿ, ಶಾರದೆಯ ಹಿರಿಯ ಮಗ 'ಅಂಕಲ್ (ಮುಕುಂದನ ತಂಗಿಯ ಗಂಡ) ಅಮ್ಮನನ್ನು ಬಡಿದರು, ಆಕೆಗೆ ಬೆಂಕಿ ಹಚ್ಚಿದರು" ಎಂದು ಹೇಳಿದಾಗ ಸ್ಟೌ ಸಿಡಿದು ಗಾಯಗೊಂಡಳೆಂಬ ಮಾತು ಪೂರ್ತಿ ಸುಳ್ಳು, ಒಂದು ಕಟ್ಟುಕಥೆ ಎಂಬುದು ಸ್ಪಷ್ಟವಾಗಿತ್ತು.

ಶಾರದೆಯ ತಂದೆ ತಹಶೀಲ್ದಾರರ ಬಳಿ ಅವರೆಗೆ ಶಾರದೆಗೆ ಕೊಟ್ಟ ಕಿರುಕುಳ, ಸ್ಕೂಟರ್, ಹಣ ಇತ್ಯಾದಿಗಳೆನ್ನು ತರಬೇಕೆಂದು ಒತ್ತಾಯಿಸಿದ್ದು ಎಲ್ಲವನ್ನು ವಿವರಿಸಿದರು. ಈ ಕೇಸನ್ನು C.O.Dಗೆ ವರ್ಗಾಯಿಸಲಾಯಿತು. ಇದಾಗಿ ಒಂದು ತಿಂಗಳೇ ಆದರೂ ಪೊಲೀಸರು ಆರೋಪಿಯನ್ನು ಅರೆಸ್ಟ್ ಮಾಡಲಿಲ್ಲ. ಅವರಿಗೆ ಸಾಕ್ಷ್ಯಾಧಾರಗಳಿರಲಿಲ್ಲವಂತೆ!

ಶಾರದೆ ಸತ್ತು ಎರಡು ದಿನದ ನಂತರ ರೇವಣ್ಣ ಎಂಬ ವ್ಯಕ್ತಿಯೊಬ್ಬರು ಬಂದು ಹೀಗೆ ಹೇಳಿದರು. ತಾನು ಮತ್ತು ತನ್ನ ಗೆಳೆಯ ನರಸಿಂಹಯ್ಯ ಶಾರದೆಯ ಮನೆಯ ಮುಂದೆ ನಡೆದು ಹೋಗುತ್ತಿದ್ದರಂತೆ. ಆಗ ಯಾತನೆಯಿಂದ ಚೀರುತ್ತಿರುವ ಹೆಣ್ಣು ದನಿಯೊಂದು ಕೇಳಿಬಂತು. ಆ ಧ್ವನಿ ಮೊದಲನೆಯ ಮಹಡಿಯ ಮನೆಯಿಂದ ಬರುತ್ತಿದ್ದುದನ್ನು ಕಂಡುಕೊಂಡು ಯಾರೋ ಕಳ್ಳರ ನುಗ್ಗಿ ಹೆಂಗಸಿಗೆ ಬೆದರಿಸುತ್ತಿರಬಹುದೆಂದು ಭಾವಿಸಿ ಇಬ್ಬರೂ ಆ ಮನೆಯತ್ತ ಧಾವಿಸಿದರು. ಆದರೆ ಅಲ್ಲಿ ಅವರೊಂದು ಭಯಂಕರ ದೃಶ್ಯವನ್ನೇ ಕಂಡರು. ಹಾಲ್‌ನಲ್ಲಿ ಮಗುವನ್ನೆತ್ತಿಕೊಂಡು ಗೋಡೆಗೊರಗಿಕೊಂಡು ವ್ಯಕ್ತಿಯೊಬ್ಬ ನಿಂತಿದ್ದ. ತಲೆಗೆ ಬೆಡ್‌ಶೀಟ್ ಸುತ್ತಿಕೊಂಡ ವ್ಯಕ್ತಿಯೊಬ್ಬ ಹೆಂಗಸೊಬ್ಬಳನ್ನು ಎಳೆದಾಡುತ್ತಿದ್ದ. ಇನ್ನೊಬ್ಬ ಕಪ್ಪು ಬಣ್ಣದ, ತುಸು ಬಾಲ್ಡ್ ಆಗಿದ್ದ ವ್ಯಕ್ತಿ ಆತನಿಗೆ ಆಕೆ ಕೆಳಗೆ ಬಿದ್ದಕೂಡಲೇ ಬೆಂಕಿ ಹಚ್ಚಿ ಸುಟ್ಟುಬಿಡು ಎಂದು ಆದೇಶ ನೀಡುತ್ತಿದ್ದ. ನರಸಿಂಹಯ್ಯ-ರೇವಣ್ಣರು ಈ ದೃಶ್ಯ ನೋಡಿ ವಿಭ್ರಾಂತರಾದರು. ಮಾತು ಹೊರಡಲಿಲ್ಲ. ರೇವಣ್ಣ 'ಆಕೆಯನ್ನು ಬಿಟ್ಟುಬಿಡಿ' ಎಂದು ಚೀರಿದರು. ಆದರೆ ಕಪ್ಪನೆಯ, ಕೂದಲುದುರಿದ್ದ ಮನುಷ್ಯ ಇವರತ್ತ ಹರಿತವಾದ ಚಾಕು ತೋರಿಸುತ್ತ ಹೊರಟುಹೋಗಿ ಇಲ್ಲಿಂದ, ಇಲ್ಲವಾದರೆ ಕೊಂದುಬಿಡುತ್ತೇನೆ' ಎಂದು ಗದರಿದ. ರೇವಣ್ಣ-ನರಸಿಂಹಯ್ಯ ಹೆದರಿ ಆ ಸ್ಥಳದಿಂದ ಹೊರಟು ತಮ್ಮ ಹಳ್ಳಿ ಸೇರಿಕೊಂಡರು. ಮರು ದಿನ ಸ್ಟೌವ್ ಸಿಡಿದು ರಾಮಯ್ಯನವರ ಮಗಳು ಶಾರದೆ ಸತ್ತು ಹೋದಳಂತೆ ಎಂದು ಜನ ಮಾತಾಡಿಕೊಳ್ಳುತ್ತಿದ್ದುದನ್ನು ಕೇಳಿದ. ಶಾರದೆಯ ತಂದೆ ರಾಮಯ್ಯನವರ ಹಳ್ಳಿಯಲ್ಲೇ ರೇವಣ್ಣನೂ ಇದ್ದನಾದ್ದರಿಂದ ಈಗ ಆತನ ಮನಸ್ಸು ತೆಪ್ಪಗಿರಲು ಬಿಡಲಿಲ್ಲ. ಅವರಿವರನ್ನು ಕೇಳಿ ಅದೇ ಊರಿನಲ್ಲಿದ್ದ ರಾಮಯ್ಯನ ಮನೆ ಪತ್ತೆ ಹಚ್ಚಿದ. ಅವರಲ್ಲಿಗೆ ಬಂದು ತಾನು ಮುನ್ನಾ ದಿನ ಪೀಣ್ಯ ದಾಸರಹಳ್ಳಿಯ ಆ ಮಹಡಿ ಮನೆಯಲ್ಲಿ ಕಂಡ ದೃಶ್ಯವನ್ನು ವಿವರಿಸಿದ. ಮುಂದೆ ಯಾವುದೇ ಸಂದರ್ಭದಲ್ಲಾದರೂ ಸರಿ ತಾನು, ತನ್ನ ಗೆಳೆಯ ಈ ಬಗ್ಗೆ ಸಾಕ್ಷಿ ಹೇಳುವುದಾಗಿಯೂ ಒಪ್ಪಿಕೊಂಡ. ನರಸಿಂಹಯ್ಯ-ರೇವಣ್ಣ ಇಬ್ಬರೂ ಪ್ರತ್ಯಕ್ಷ ನೋಡಿದ್ದರ ವಿವರಗಳನ್ನು ಈ ಕೇಸನ್ನು ನೋಡುತ್ತಿದ್ದ ಪರದಕ್ಷಿಣೆ ಅಪರಾಧ ವಿಭಾಗದ ಆಫೀಸರರ ಬಳಿ ಹೇಳಿದರು. ಇದಾದ ಐದು ತಿಂಗಳ ನಂತರ, ADC (Anti Dowry Cell) ಅವರು ಸಿದ್ಧಪಡಿಸಿದ ಚಾರ್ಜ್ ಶೀಟ್‌ನಲ್ಲಿ ಈ ರೇವಣ್ಣ, ನರಸಿಂಹಯ್ಯ ಎಂಬ ಪ್ರತ್ಯಕ್ಷ ಸಾಕ್ಷಿಗಳ ಹೆಸರೇ ಸೇರಿಸಿರಲಿಲ್ಲ ಎಂಬುದು ತಿಳಿಯಿತು. ಇದೆಲ್ಲವೂ ಅಪರಾಧಿಗಳನ್ನು ರಕ್ಷಿಸಲೆಂದೇ ಯೋಜಿತಗೊಂಡ ಚಾರ್ಜು ಎಂದು ತಿಳಿಯುವುದು ಕಷ್ಟವೇನಲ್ಲ.

ಇಂಥ ಸನ್ನಿವೇಶಗಳಲ್ಲಿ ನ್ಯಾಯಾಂಗದಲ್ಲಿ ನ್ಯಾಯ ಹೇಗೆ ಸಿಕ್ಕೀತು? ಇಷ್ಟು ಸ್ಪಷ್ಟವಾಗಿ ಕೊಲೆಯೇ ನಡೆದಿರುವಾಗಲೂ ಪೊಲೀಸರು ಆರೋಪಿಯನ್ನು ಅರೆಸ್ಟ್ ಮಾಡದೆ ನಿಧಾನ ಗತಿಯಲ್ಲಿ ನಡೆದರು. ಸುಮಾರು ಒಂದೂವರೆ ತಿಂಗಳ ಅನಂತರ ಶಾರದೆಯ ಮನೆಯವರೇ ಹಾಸನದ ಹೋಟೆಲ್‌ನಲ್ಲಿ ಮೇಜವಾನಿ ಮಾಡುತ್ತಿದ್ದ ಈ ಕೊಲೆಗಾರರನ್ನು ಪತ್ತೆ ಹಚ್ಚಿ ತೋರಿಸಿದ ಮೇಲೆ ವಿಧಿಯಿಲ್ಲದೆ ಅವರನ್ನು ಇನ್ನು ರಕ್ಷಿಸಲು ಸಾಧ್ಯವಾಗದಾಗ ಅರೆಸ್ಟ್ ಮಾಡಿದರು! ಅಲ್ಲಿಯವರೆಗೆ ADC ಯವರು ಏನು ಮಾಡುತ್ತಿದ್ದರು? ಅವರಿಗೆಲ್ಲ ಸಾಕಷ್ಟು ಹಣ ಸಂದಾಯವಾಗಿರಬಹುದೆಂದು ಭಾವಿಸಬಹುದೆ?

ಇದನ್ನು ಆ ಅಧಿಕಾರಿಗಳ ಅಸಾಮರ್ಥ್ಯ ಎನ್ನಬಹುದೆ?

ಅಥವಾ ಅವರುಗಳಿಗೆ ವೃತ್ತಿನಿಷ್ಠೆ ಇಲ್ಲವೆ? ಸ್ತ್ರೀಯರಿಗಾಗುವ ಹಿಂಸೆ, ದೌರ್ಜನ್ಯ, ಕೊಲೆ ಇತ್ಯಾದಿಗಳಿಗೆ ನ್ಯಾಯಾಂಗದಲ್ಲಿ ಅಂಥ ಮಹತ್ವ-ಇಲ್ಲವಾಗಿದೆಯೆ?

ಸಮಾಜದಲ್ಲಿನ ಹಿಂಸೆ ಅಪರಾಧಗಳಲ್ಲಿ ಮಹಿಳೆಯರ ಮೇಲಾಗುವ ದೌರ್ಜನ್ಯವನ್ನು ಕಡೆಗಣಿಸಲಾಗಿದೆಯೆ? ಮುಗ್ಧ ನಿರಪರಾಧಿ ಮಹಿಳೆಯರ ಕೊಲೆಯಾಗುತ್ತಿರುವುದು ಸಾಮಾಜಿಕ ವ್ಯವಸ್ಥೆಗೆ ಆತಂಕವನ್ನೆ ಉಂಟು ಮಾಡಿಲ್ಲವೆ? ●

ಮಹಿಳಾ ಸಮಖ್ಯಾ - ಶೋಷಣೆಯ ಹೊಸ ಕತೆ

ಕಳೆದ ಕೆಲವರ್ಷಗಳಿಂದ ಪತ್ರಿಕೆಯ ಮೂಲಕ 'ಮಾನಸ' ಮಹಿಳಾ ಸಮಖ್ಯಾದ ಸಹಯೋಗಿನಿಯರ ಅವಿರತ ಹೋರಾಟವನ್ನು ಬೆಂಬಲಿಸುತ್ತಾ ಬಂದಿದೆ. ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮ ಮಹಿಳಾ ಸಮಖ್ಯಾದಲ್ಲಿ ನಡೆಯುತ್ತಿರುವ ಅನ್ಯಾಯದ ವಿರುದ್ಧ ಮಹಿಳಾ ಸಮಖ್ಯಾ ಕಾರ್ಮಿಕರ ಸಂಘವು ಹೋರಾಡುತ್ತ ಬಂದಿದೆ. 1998 ಸೆಪ್ಟಂಬರ್ 3ರಂದು ಅನ್ಯಾಯದ ಹೊಸ ಅಧ್ಯಾಯವೊಂದು ಪ್ರಾರಂಭವಾಯ್ತು. ಮೈಸೂರು ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ 13 ಜನ ಸಹಯೋಗಿನಿಯರನ್ನು ಹೇಳದೆ ಕೇಳದೆ ಕೆಲಸದಿಂದ ತೆಗೆದು ಹಾಕಲಾಯ್ತು. ಗಾಭರಿಗೊಂಡ ಸಹಯೋಗಿನಿಯರು ತಕ್ಷಣವೆ ಒಟ್ಟುಗೂಡಿ ತಮ್ಮ ಮಹಿಳಾ ಸಮಖ್ಯಾ (ಕರ್ನಾಟಕ) ಕೆಲಸಗಾರರ ಅಸೋಸಿಯೇಷನ್ ಮೂಲಕ ಕೆಲಸದಿಂದ ವಜಾ ಮಾಡಿದ್ದ ಆಜ್ಞೆಯನ್ನು ಪ್ರಶ್ನಿಸಿದರು. ವಿಷಯ ತಿಳಿಯುತ್ತಿದ್ದಂತೆಯೆ ಬೆಂಗಳೂರಿನ ಮಹಿಳಾ ಸಂಘಟನೆಗಳು, ಪ್ರಜಾತಾಂತ್ರಿಕ ಹಕ್ಕುಗಳ ವೇದಿಕೆಗಳು ಮತ್ತು ಸ್ವಯಂ ಸೇವಾಸಂಸ್ಥೆಗಳು ಸಹಯೋಗಿನಿಯರ ಹೋರಾಟವನ್ನು ಬೆಂಬಲಿಸಿದರು. ಮಹಿಳಾ ಸಮಖ್ಯಾದ ಅಧಿಕಾರಿ ವರ್ಗದವರ ಉದ್ಧಟತನವನ್ನು ಖಂಡಿಸಿದರು. ಸೆಪ್ಟೆಂಬರ್ 16ರಂದು ಸಮಖ್ಯಾ ಕೆಲಸಗಾರರ ಸಂಘವು ಬೃಹತ್ ರ‍್ಯಾಲಿಯೊಂದನ್ನು ಏರ್ಪಡಿಸಿತ್ತು. ರ‍್ಯಾಲಿಯ ಯಶಸ್ಸು, ಸಮಖ್ಯಾ ಕುರಿತು ಸಾರ್ವಜನಿಕರ ಟೀಕೆ ಹಾಗು ಸುದ್ದಿ ಮಾಧ್ಯಮಗಳ ಸಹಕಾರ ಅಧಿಕಾರಿ ವರ್ಗದ ಮೇಲೆ ಒತ್ತಡ ತಂದಿದ್ದುದರಿಂದಾಗಿ ವಜಾ ಆಜ್ಞೆಯನ್ನು ಹಿಂತೆಗೆದುಕೊಳ್ಳಲಾಯ್ತು. ಆದರೆ ಅವರ ಮೇಲೆ ವಿಚಾರಣೆ ನಡೆಸಬೇಕೆಂದು ಹೇಳಿದ್ದಾರೆ. ಈ ಘಟನೆ ಕುರಿತ ವಿವರಗಳನ್ನು ಕೆಳಗೆ ನೀಡಲಾಗಿದೆ.

ಮಾನಸ ಓದುಗರಿಗೆ ಈಗಾಗಲೆ ಮಹಿಳಾ ಸಮಖ್ಯಾದ ಪರಿಚಯವಿದೆ. ಮಹಿಳಾ ಸಮಖ್ಯಾ (ಕರ್ನಾಟಕ) ಒಂದು ಸರ್ಕಾರ ಪ್ರಾಯೋಜಿಸಿರುವ ಮಹಿಳಾ ಸಶಕ್ತತೆಯ ಕಾರ್ಯಕ್ರಮ. 1986ರ ಶಿಕ್ಷಣ ನೀತಿಯು ಮಹಿಳೆಯರ ಸಶಕ್ತತೆ ಮತ್ತು ಸಮಾನತೆಗೆ ಒತ್ತು ನೀಡಿದ್ದರ ಪರಿಣಾಮವಾಗಿ ಈ ಕಾರ್ಯಕ್ರಮ ಜಾರಿಗೆ ಬಂತು. ಮಹಿಳಾ ಸಮಖ್ಯಾದ ಮುಖ್ಯ ಉದ್ದೇಶವೆಂದರೆ ಮಹಿಳೆಯರು ಅದರಲ್ಲೂ ಬಡಮಹಿಳೆಯರು ತಮ್ಮ ಬದುಕು ಮತ್ತು ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದುವಂತಹ ವಾತಾವರಣವನ್ನು ಸೃಷ್ಟಿಸುವುದು, 1989ರಲ್ಲಿ ಈ ಕಾರ್ಯಕ್ರಮ ಪ್ರಾರಂಭವಾದಾಗ, ಮಹಿಳೆಯರನ್ನು ಸಶಕ್ತಗೊಳಿಸುವ ಪ್ರಕ್ರಿಯೆಯಲ್ಲಿ ಸಾಕ್ಷರತೆ ಒಂದೇ ಅಲ್ಲದೆ ನಿರ್ಧಾರ ಕೈಗೊಳ್ಳುವ ಮತ್ತು ಸ್ವಾವಲಂಬನೆಯನ್ನು ಒಳಗೊಂಡ ಒಟ್ಟಾರೆ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗಿತ್ತು. ಅದಕ್ಕಾಗಿ ಹಳ್ಳಿಯ ಮಟ್ಟದಲ್ಲಿ ಮಹಿಳಾ ಸಂಘಗಳನ್ನು ಪ್ರಾರಂಭಿಸಲಾಯ್ತು. ಈಗ ಮಹಿಳಾ ಸಮಖ್ಯಾ ಕರ್ನಾಟಕದ 1000 ಹಳ್ಳಿಗಳಲ್ಲಿ ಕೆಲಸ ಮಾಡುತ್ತಿದೆ. ಇಂದು ಇದು ಸುಮಾರು 50,000 ಮಹಿಳೆಯರ ಬದುಕಿಗೆ ಸಂಬಂಧಿಸಿದಾಗಿದೆ.

ಮಹಿಳಾ ಸಮಖ್ಯಾದ ಶುರುವಿನಲ್ಲಿ ಕಾರ್ಯಕ್ರಮ ಹಲವಾರು ಯಶಸ್ವಿಕತೆಗಳನ್ನು ಕಂಡಿತು. ಕೆಲ ಸಮಯದ ನಂತರ ಅದರ ಕಾರ್ಯ ವಿಧಾನ ಬದಲಾಯಿತು. ಸಹಯೋಗಿನಿಯರ ಸಕ್ರೀಯ ಭಾಗವಹಿಸುವಿಕೆಯನ್ನು ಒಳಗೊಂಡಿದ್ದ ಕಲೆಕ್ಟಿವ್ ಶೈಲಿಯ ಕಾರ್ಯವಿಧಾನವು ಬದಲಾಗಿ ನಿಧಾನವಾಗಿ ಮೇಲಿಂದ ನಿರ್ಧಾರಗಳು ಕೈಗೊಂಡು ಕೆಳಗಿನ ಹಂತಕ್ಕೆ ತಲುಪುವ ವಿಧಾನ ಜಾರಿಗೆ ಬಂತು. ಹಳ್ಳಿಯಲ್ಲಿ ಫೀಲ್ಡ್ ವರ್ಕರ್ಸ್ ಆಗಿ ಕೆಲಸ ಮಾಡುವ ಸಹಯೋಗಿನಿಯರು ಸಮಖ್ಯಾದ ಬೆನ್ನೆಲುಬು ಎನ್ನಬಹುದು. ಅವರ ಅನುಭವ, ದನಿಯನ್ನು ಸಂಪೂರ್ಣವಾಗಿ ಕಡೆಗಣಿಸಲಾಯ್ತು. ಬದಲಿಗೆ ಅಧಿಕಾರ ಗೋಪುರದ ತುದಿಯಿಂದ ಅಭಿಪ್ರಾಯಗಳು, ವಿಷಯ ಸಾಮಗ್ರಿಗಳು 'ಪರಿಣಿತ'ರಿಂದ ಬರತೊಡಗಿದವು. ಹೀಗೆ ಘೋಷಿಸಿದ ಉದ್ದೇಶಗಳಿಂದ ಕಾರ್ಯಕ್ರಮ ನಿಧಾನವಾಗಿ ದೂರ ಸರಿಯತೊಡಗಿತು. ಹಾಗೆಯೇ ಸಹಯೋಗಿನಿಯರ ಸ್ಥಾನಮಾನ ಕೆಳಗಿಳಿಯಿತು.

ಮೊದಲಿನಿಂದಲೂ ಸಹಯೋಗಿನಿಯರ ಪಾತ್ರವನ್ನು ಸ್ಪಷ್ಟಪಡಿಸಿರಲಿಲ್ಲ. ಆಕೆಯ ಸೇವೆಯನ್ನು ಮಾಲೀಕ-ಕಾರ್ಮಿಕ ಅರ್ಥದಲ್ಲಿ ಪರಿಗಣಿಸದೆ, ಸ್ವಯಂ ಸೇವೆ ಎಂದು ಪರಿಗಣಿಸಲಾಗಿತ್ತು. ಆ ಕಾರಣ ಆಕೆಗೆ ಸಂಬಳ ನೀಡದೆ ಗೌರವ ಧನವನ್ನು ನೀಡಲಾಗುತ್ತಿತ್ತು. ಆಕೆಯ ಕೆಲಸವನ್ನು ಸ್ಪಷ್ಟಪಡಿಸದಿದ್ದರಿಂದಾಗಿ ಪುಡಿಗಾಸನ್ನು 'ಗೌರವಧನ'ವೆಂದು ನೀಡಲಾಗುತ್ತಿತ್ತು. ಕಾರ್ಯಕ್ರಮ ಪ್ರಾರಂಭದಿಂದಲೂ ನಿಗದಿತ ಕೆಲಸ, ಕೆಲಸದ ಪರಿಸ್ಥಿತಿಯು ಇಲ್ಲದಿದ್ದುದೆ ಶೋಷಣೆಯ ಮುಖ್ಯ ಅಂಶ. ಪ್ರಾರಂಭದ ದಿನಗಳಲ್ಲಿ ಕಾರ್ಯಕ್ರಮವನ್ನು ಸ್ಥಾಪಿಸಲು ಸಹಯೋಗಿನಿಯ ಭಾಗವಹಿಸುವಿಕೆಗೆ ಉತ್ಸಾಹದ ಪ್ರೋತ್ಸಾಹ ದೊರಕಿತು. ಶೋಷಣೆಯ ಅಂಶಗಳು ಆ ಸಮಯದಲ್ಲಿ ಕಾಣಲಿಲ್ಲ ಅಥವಾ ಇದ್ದರೂ ಪ್ರಾರಂಭದ ಉತ್ಸಾಹದಲ್ಲಿ ಅದನ್ನು ಗಮನಿಸಿರಲಿಲ್ಲ. ಆನಂತರ ಕಾರ್ಯಕ್ರಮದ ಪ್ರತಿ ಅಂಶದಲ್ಲೂ ಅಧಿಕಾರಿ ಧೋರಣೆ ಕಾಲಿಟ್ಟಿತು. ಸಹಯೋಗಿನಿಯರ ಕೆಲಸ ಇಂತಹದು ಎಂದು ಸ್ಪಷ್ಟವಾಗಿಲ್ಲದಿದ್ದುದರಿಂದಾಗಿ ಎಲ್ಲಾ ಸಮಯದಲ್ಲೂ ಅವರು ಫೀಲ್ಡ್‌ನಲ್ಲಿ ಇರಬೇಕಾದ ಒತ್ತಡವಿರುತ್ತಿತ್ತು. ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಿಂದ ಸಹಯೋಗಿನಿಯರನ್ನು ಹೊರಗಿಡುವುದು, ಮನಸ್ಸಿಗೆ ಬಂದಂತೆ ವಜಾ ಮಾಡುವುದು, ಧಿಡೀರೆಂದು ಹಣ ನೀಡುವುದನ್ನು ನಿಲ್ಲಿಸುವುದು, ಶೋಷಿಸುವ ನಿಯಮಗಳನ್ನು ಹೇರುವುದು ಮಾಮೂಲಿಯಾಗತೊಡಗಿತು. ಹಳ್ಳಿಯ ಸೋದರಿಯರನ್ನು ಸಶಕ್ತಗೊಳಿಸುವ ಜವಾಬ್ದಾರಿ ಹೊತ್ತ ಸಹಯೋಗಿನಿಯರು ಕಾರ್ಯಕ್ರಮದಲ್ಲಿ ತಾವೆ ಅಶಕ್ತರಾಗತೊಡಗುತ್ತಿರುವುದನ್ನು

ಅರಿಯತೊಡಗಿದರು. ಸಹಯೋಗಿನಿಯರೊಂದಿಗೆ ಸಮಖ್ಯಾ ಕಾರ್ಯಕ್ರಮದಡಿ ಫೀಲ್ಡ್‌ನಲ್ಲಿ ಹಿರಿಯರಿಗೆ ಅಕ್ಷರ ಕಲಿಸುವ ಮತ್ತು ಅನೌಪಚಾರಿಕ ಶಿಕ್ಷಣ ಕೇಂದ್ರಗಳಲ್ಲಿ ಉಪಾಧ್ಯಾಯಿನಿಯರಾಗಿ ಕೆಲಸ ಮಾಡುವವರು, ಬಾಲವಾಡಿಯಲ್ಲಿ ಕೆಲಸ ಮಾಡುವವರ ಪರಿಸ್ಥಿತಿಯೂ ಅದೇ ಆಯಿತು.

1994ರಿಂದ ಹಳ್ಳಿಯಲ್ಲಿನ ಸಂಘಗಳ ಚಟುವಟಿಕೆಗಳನ್ನು ನಿಲ್ಲಿಸಲಾಯಿತು. ಸಣ್ಣ ಉಳಿತಾಯ ಮತ್ತು ಸಾಕ್ಷರತೆಯ ಕಾರ್ಯಕ್ರಮಕ್ಕಷ್ಟೇ, ಚಟುವಟಿಕೆಯನ್ನು ಸೀಮಿತಗೊಳಿಸಲಾಯ್ತು. ಹಳ್ಳಿಯ ಮಹಿಳೆಯರ ಸಣ್ಣಪುಟ್ಟ ಉಳಿತಾಯದೊಂದಿಗೆ ಮಹಿಳಾ ಸಮಖ್ಯಾದ ಸಹಾಯಧನವನ್ನು ಸಂಘದ ಹೆಸರಿನಲ್ಲಿ ಬ್ಯಾಂಕಿನಲ್ಲಿಡಲಾಗುತ್ತಿತ್ತು. ಬ್ಯಾಂಕಿನಲ್ಲಿ ವ್ಯವಹರಿಸಲು ಅಕ್ಷರ ಕಲಿಯಲೇಬೇಕೆಂಬ ನಿಯಮ ಮಾಡಲಾಗಿತ್ತು. ಮಹಿಳಾ ಸಮಖ್ಯಾವು ಸಂಘದ ಬ್ಯಾಂಕ್ ಖಾತೆಯನ್ನು ಮುಚ್ಚಿಬಿಡಲು ತೀರ್ಮಾನಿಸಿದಾಗ ಹಳ್ಳಿಯಲ್ಲಿನ ಸಂಘದ ಮಹಿಳೆಯಲ್ಲಿ ಸಿಟ್ಟು, ಅತೃಪ್ತಿಯುಂಟಾಯಿತು, ಅವರ ಸಿಟ್ಟು ಹಳ್ಳಿಯಲ್ಲಿ ಸಮಖ್ಯಾ ಕಾರ್ಯಕ್ರಮವನ್ನು ಪ್ರತಿನಿಧಿಸುತ್ತಿದ್ದ ಸಹಯೋಗಿನಿಯರತ್ತ ತಿರುಗಿತು. ಈ ಬೆಳವಣಿಗೆಯನ್ನು ಸಮಖ್ಯಾದ ಆಡಳಿತ ವರ್ಗದವರಿಗೆ ಸಹಯೋಗಿನಿಯರು ತಾವೇ ಅಥವಾ ಸಮಖ್ಯಾ ಕಾರ್ಮಿಕರ ಸಂಘದ ಮೂಲಕ ತಿಳಿಸಿದರು. ಅಲ್ಲದೆ ಕಾರ್ಯಕ್ರಮವನ್ನು ಮತ್ತೆ ಪರಿಣಾಮಕಾರಿಯಾಗಿಸಲು ಹೊಸ, ಕ್ರಿಯಾತ್ಮಕ ವಿಧಾನಗಳನ್ನು ತರಬೇಕೆಂದು ಕೇಳಿಕೊಂಡರು. ಆದರೆ ಆಡಳಿತವರ್ಗವು ಸಮಸ್ಯೆಗೆ ಸ್ಪಂದಿಸುವ ಬದಲು ಸಹಯೋಗಿನಿಯರಿಗೆ ಹೆಚ್ಚಿನ ಕಿರುಕುಳ ನೀಡುವುದನ್ನು ಪ್ರಾರಂಭಿಸಿದರು.

ಸಂಘದ ಸದಸ್ಯರ ಕೋಪವನ್ನು, ಮೇಲಿನವರ ಕಿರುಕುಳವನ್ನು ಎದುರಿಸಬೇಕಾದಂತಹ ಕಷ್ಟದ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡ ಸಹಯೋಗಿನಿಯರು ತಾವೇ ತೀರ್ಮಾನಿಸಿ ಮೈಸೂರು ಜಿಲ್ಲೆಯ ಸಂಘಗಳ ವಿಸ್ತಾರವಾದ ಮೋಜಣಿ (Survey)ಯನ್ನು ನಡೆಸಿದರು. ಮೋಜಣಿಯ ಆಧಾರದ ಮೇಲೆ ವರದಿಯನ್ನು ತಯಾರಿಸಿದರು. ವರದಿಯು ಸಂಘದ ಮಹಿಳೆಯರ ಸಮಸ್ಯೆಗಳು, ವಿಚಾರಗಳು, ಬಯಕೆಗಳು ಮತ್ತು ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಾಗ ಸಹಯೋಗಿನಿಯರು ಎದುರಿಸುವ ಸಮಸ್ಯೆಗಳನ್ನು ದಾಖಲಿಸಿದೆ. ವರದಿಯನ್ನು ಸಲ್ಲಿಸಲು ಸೆಪ್ಟೆಂಬರ್ ೩, ೧೯೯೮ರಂದು ಮೈಸೂರಿನ ಜಿಲ್ಲಾ ಕಛೇರಿಗೆ ಸಹಯೋಗಿನಿಯರು ತೆರಳಿದಾಗ ಅವರ ಪ್ರಯತ್ನವನ್ನು ಶ್ಲಾಘಿಸದೆ 13 ಜನ ಸಹಯೋಗಿನಿಯರನ್ನು ವಜಾ ಮಾಡಿರುವ ಆದೇಶ ಪತ್ರವನ್ನು ನೀಡಲಾಯಿತು. ಯಾವ ಸೂಚನಾಪತ್ರ ನೀಡದೆ, ವಿಚಾರಣೆ ನಡೆಸದೆ ಅವರನ್ನು ವಜಾ ಮಾಡಲಾಗಿತ್ತು. ಕ್ಷುಲ್ಲಕ, ಅಸಂಬದ್ಧ ಕಾರಣ ನೀಡಿ ಅವರನ್ನು ವಜಾ ಮಾಡಲಾಗಿತ್ತು. ಮಹಿಳಾ ಸಮಖ್ಯಾದ ತತ್ವಕ್ಕೆ ವಿರುದ್ಧವಾಗಿ ಮಹಿಳೆಯರನ್ನು ಎತ್ತಿ ಕಟ್ಟುತ್ತಿದ್ದಾರೆ, ಸಹೋದ್ಯೋಗಿಗಳನ್ನು ಮಹಿಳಾ ಸಮಖ್ಯಾದ ವಿರುದ್ಧ ಎತ್ತಿ ಕಟ್ಟಿ ಅವರನ್ನು ಹಾದಿ ತಪ್ಪಿಸುತ್ತಿದ್ದಾರೆ ಮತ್ತು ಸಹಯೋಗಿನಿಯರಿಗೆ ಮಹಿಳೆಯರನ್ನು ಸಂಘಟಿಸುವ ಕೌಶಲ್ಯವಿಲ್ಲವೆಂಬ ಕಾರಣಗಳನ್ನು ನೀಡಿದರು.

ವಜಾ ಮಾಡಲು ನೀಡಿದ ಕಾರಣಗಳು ಮತ್ತು ಅವರಿಗಿಷ್ಟ ಬಂದಂತೆ ಸೂಚನಾ ಪತ್ರ ನೀಡಿದ ರೀತಿ ಸಹಯೋಗಿನಿಯರನ್ನು ಸಿಟ್ಟಿಗೆಬ್ಬಿಸಿತು. ಆಡಳಿತ ವರ್ಗದವರ ಈ ವರ್ತನೆ, ಕಾರ್ಯಕ್ರಮವು ತನ್ನ ಮೂಲ ಉದ್ದೇಶದಿಂದಲೆ ದೂರ ಸರಿದು ಶೋಷಣಾತ್ಮಕ ವಿಧಾನ ಜಾರಿಗೊಂಡಿರುವುದನ್ನು ಸ್ಪಷ್ಟಪಡಿಸಿತು. ಸಹಯೋಗಿನಿಯರನ್ನು ವಜಾ ಮಾಡಿದ ಸುದ್ದಿ ತಿಳಿದ ಬೆಂಗಳೂರಿನ ಮಹಿಳಾ ಗುಂಪುಗಳ, ಪ್ರಜಾಸತ್ತಾತ್ಮಕ ಹಕ್ಕುಗಳ ವೇದಿಕೆ ಮತ್ತು ಇತರ ಸ್ವಯಂ ಸೇವಾ ಸಂಸ್ಥೆಗಳನ್ನೊಳಗೊಂಡ ಬೆಂಬಲ ಗುಂಪು ವಜಾ ಮಾಡಿದ್ದನ್ನು ಖಂಡಿಸಿ, ಸಹಯೋಗಿನಿಯರನ್ನು ಕೂಡಲೆ ಕೆಲಸಕ್ಕೆ ವಾಪಸ್ಸು ತೆಗೆದುಕೊಳ್ಳಬೇಕೆಂದು ಒತ್ತಾಯಿಸಿತು. ಸೆಪ್ಟೆಂಬರ್ 11ರಂದು ಪತ್ರಕರ್ತರ ಸಭೆಯನ್ನು ಕರೆದು ನಡೆದಿರುವ ಘಟನೆಯ ವಿವರವನ್ನು ಬಹಿರಂಗಗೊಳಿಸಲಾಯ್ತು. ಅನೇಕ ಪತ್ರಿಕೆಗಳು ವಿಷಯ ಕುರಿತು ಪ್ರಕಟಿಸಿದವು. ಸಭೆಯಲ್ಲಿ ತಿಳಿಸಿದಂತೆ ಸೆಪ್ಟೆಂಬರ್ 16ರಂದು ಮೈಸೂರಿನಲ್ಲಿ ಸಹಯೋಗಿನಿಯರನ್ನು ವಜಾ ಮಾಡಿರುವುದನ್ನು ವಿರೋಧಿಸಿ ರ‍್ಯಾಲಿಯನ್ನು ಏರ್ಪಡಿಸಲಾಗಿತ್ತು.

ಮೈಸೂರಿನಲ್ಲಿ ನಡೆದ ರ‍್ಯಾಲಿಯು ಯಶಸ್ವಿಯಾಗಿ ನಡೆದುದಲ್ಲದೆ ಆಡಳಿತ ವರ್ಗದವರ ಮೇಲೆ ಒತ್ತಡ ತರಲು ಸಹಾಯಕವಾಯಿತು. ಮತ್ತು ಎಲ್ಲೆಡೆಯಿಂದ ಬಂದ ಖಂಡನೆಯಿಂದಾಗಿ ಆಡಳಿತ ವರ್ಗವು 10 ಜನರ ಸಹಯೋಗಿನಿಯರ ವಜಾ ಆಜ್ಞೆಯನ್ನು ರದ್ದುಪಡಿಸಿತು. 3 ಜನರನ್ನು ಈಗ ಅಮಾನತ್ತಿನಲ್ಲಿಟ್ಟಿದೆ. ಇದು ಸಹಯೋಗಿನಿಯರ ಪಾಲಿಗೆ ದೊಡ್ಡ ವಿಜಯ. ಅಲ್ಲದೆ ಮಹಿಳಾ ಸಮಖ್ಯಾ ಕಾರ್ಮಿಕರ ಸಂಘಟನೆಗೆ ಸಂದ ಗೆಲುವು. ವಜಾ ಮಾಡಿದ ಸಹಯೋಗಿನಿಯರನ್ನು ಹಿಂತೆಗೆದುಕೊಳ್ಳಲಾಗಿದೆಯಾದರೂ ಅವರು ವಿಚಾರಣೆಯನ್ನು ಎದುರಿಸುತ್ತಿದ್ದಾರೆ. ಇದರಿಂದ ಅವರು ಧೃತಿಗೆಟ್ಟಿಲ್ಲ. ವಿಪರ್ಯಾಸವೆಂದರೆ ಯಾವ ಕಾರ್ಯಕ್ರಮ ಸಶಕ್ತತೆ ನೀಡಲು ಪ್ರಾರಂಭವಾಯಿತೊ ಅದು ಸಹಯೋಗಿನಿಯರಿಗೆ ಬಲ ನೀಡಲಿಲ್ಲ, ಆದರೆ ಅನ್ಯಾಯದ ವಿರುದ್ಧ ನಡೆಸಿದ ಸಂಘಟಿತ ಹೋರಾಟ ಅವರನ್ನು ಸಶಕ್ತರನ್ನಾಗಿಸಿದ್ದು. ಅನೇಕ ಸಂಘಟನೆಗಳ/ವ್ಯಕ್ತಿಗಳ ಬೆಂಬಲದೊಂದಿಗೆ ಸಹಯೋಗಿನಿಯರ, ಮಹಿಳಾ ಸಮಖ್ಯಾ ಕಾರ್ಮಿಕ ಸಂಘಟನೆಯ ಹೋರಾಟ ಮುಂದುವರೆದಿದೆ.

ವರದಿ - ನೀಲಾಂಜನ

ನಮ್ಮ ದೇಶದಲ್ಲಿ ದುಡಿವ ಮಹಿಳೆಯರ ಸಂಖ್ಯೆ 90 ಮಿಲಿಯನ್. ಅದರಲ್ಲಿ ಶೇ. 15ರಷ್ಟು ಮಹಿಳೆಯರು ಮಾತ್ರ ಸಂಘಟಿತ ಕ್ಷೇತ್ರದಲ್ಲಿದ್ದಾರೆ.

ಹೆಣ್ಣು ಬಾಲಕಾರ್ಮಿಕರ ಜೀವನ ಮತ್ತು ಪರಿಸ್ಥಿತಿ

- ಎಸ್. ಎಂ. ಮಂಗಳ, ಮೈಸೂರು

ನಮ್ಮ ದೇಶದಲ್ಲಿ ಇಂದು ಜ್ವಲಂತವಾಗಿ ಬೆಳೆದು ನಿಂತಿರುವ ಬಾಲಕಾರ್ಮಿಕತೆ ದೇಶದ ಅಭಿವೃದ್ಧಿಗೆ ಒಂದು ರೀತಿಯಲ್ಲಿ ಮಾರಕವಾಗುವುದರಲ್ಲಿ ಸಂಶಯವೇ ಇಲ್ಲ. 'ಇಂದಿನ ಮಕ್ಕಳೇ ಮುಂದಿನ ಜನಾಂಗ' ಎನ್ನುವ ವಿಚಾರ ಅಷ್ಟೇ ಸತ್ಯ. ಅಂತಹ ಮಕ್ಕಳನ್ನು ಮುಂದೆ ದೇಶದ ಸತ್ಪ್ರಜೆಗಳನ್ನಾಗಿ ಮಾಡಬೇಕಾದಲ್ಲಿ ನಮ್ಮೆಲ್ಲರ ಕರ್ತವ್ಯವೂ ಅಷ್ಟೇ ಮುಖ್ಯವಾಗುತ್ತದೆ.

ಆದರೆ ಇಂದು ಅವರತ್ತ ಗಮನ ಹರಿಸದೆ - ಅವರ ಎಳೆಯ ಮಕ್ಕಳ ಶೋಷಣೆ, ಮಿತಿಯಿಲ್ಲದ ದುಡಿಮೆ, ಅವರ ಹದಗೆಟ್ಟ ಬದುಕು, ಎಷ್ಟೋ ಮಕ್ಕಳು ಅನಾಥರಾಗಿ, ಬೀದಿಗಳಲ್ಲಿ ಅಲೆಯುತ್ತಾ, ತಮ್ಮ ಹೊಟ್ಟೆಪಾಡಿಗಾಗಿ ಯಾವುದೋ ದುಡಿಮೆಯಲ್ಲಿ ತಮ್ಮ ಬದುಕನ್ನು ನೂಕುತ್ತಾ, ತಮ್ಮನ್ನು ಹೆತ್ತ ತಂದೆ ತಾಯಿಗಳ ತಮ್ಮ ಅಕ್ಕ ತಂಗಿ, ಅಣ್ಣತಮ್ಮಂದಿರ ಹೊಟ್ಟೆ ತುಂಬಿಸುವುದಕ್ಕಾಗಿ ಅನವರತ ಹೋರಾಟ ನಡೆಸುತ್ತಿರುವ - ಈ 'ಮಕ್ಕಳ ದುಡಿಮೆ' ನಮ್ಮ ಸಮಾಜಕ್ಕೆ ಎಷ್ಟರ ಮಟ್ಟಿಗೆ ಅವಶ್ಯಕ - ಅನಿವಾರ್ಯ ಎಂಬುದನ್ನು ನಾವು ಚಿಂತಿಸಬೇಕಾಗಿದೆ.

ಎ. ಎನ್. ಸಿಂಗ್‌ರವರು "ಭಾರತದ ಬಾಲಕಾರ್ಮಿಕರು" ಎಂಬ ತಮ್ಮ ಪುಸ್ತಕದಲ್ಲಿ ಉಲ್ಲೇಖಿಸಿರುವ ಪ್ರಕಾರ - ೬ರಿಂದ ೧೪ರ ವಯೋಮಿತಿಯೊಳಗೆ ಬರುವ ಮಗು ಪೂರ್ಣಕಾಲಿಕವಾಗಿ ತನ್ನ ಕುಟುಂಬದೊಂದಿಗೆ ಅಥವಾ ವೈಯಕ್ತಿಕವಾಗಿ ದುಡಿಮೆಗೆ ತೊಡಗಿದರೆ ಅದು ಬಾಲಕಾರ್ಮಿಕತೆ ಎನಿಸಿಕೊಳ್ಳುತ್ತದೆ ಎಂಬುದಾಗಿ ಹೇಳುತ್ತಾರೆ.

೧೯೯೧ನ್ನು SAARC year of the girl child ವರ್ಷವನ್ನಾಗಿ ಹಾಗೂ '೧೯೯೪' ನೇ ವರ್ಷವನ್ನು 'ಬಾಲ್ಯವನ್ನು ರಕ್ಷಿಸಿ' ವರ್ಷವನ್ನಾಗಿ ಆಚರಿಸಲಾಗಿದೆ. ವಿಶ್ವಸಂಸ್ಥೆ ಪ್ರಕಟಿಸಿರುವ ಮಕ್ಕಳ ಹಕ್ಕುಗಳ ಪ್ರಕಾರ - ವಿಶ್ವದ ಪ್ರತಿಯೊಂದು ಮಗುವೂ ಜಾತಿ, ಜನಾಂಗ, ಮತ, ವರ್ಣ, ರಾಷ್ಟ್ರೀಯತೆ, ಭಾಷೆ ಲಿಂಗಭೇದ ಅಥವಾ ಯಾವುದೇ ಸ್ಥಾನಮಾನಗಳ ಭೇದವಿಲ್ಲದೆ ಸಮಾನವಾಗಿ ಎಲ್ಲಾ ಹಕ್ಕುಗಳ ಹಕ್ಕುಗಾರಿಕೆ ಪಡೆಯಬೇಕು ಎಂಬುದೇ ಇದರ ಉದ್ದೇಶವಾಗಿದೆ.

ಇಂದು ಭಾರತದಲ್ಲಿ ಬಾಲಕಾರ್ಮಿಕತೆ - ಅದರಲ್ಲೂ ಅಸಂಘಟಿತ ಕ್ಷೇತ್ರಗಳಾದ ವ್ಯವಸಾಯ, ಗೃಹ ಕೈಗಾರಿಕೆಗಳಲ್ಲಿ, ಹೋಟೇಲ್‌ಗಳಲ್ಲಿ, ಗ್ಯಾರೇಜ್‌ಗಳಲ್ಲಿ ಮನೆಗೆಲಸಗಳಲ್ಲಿ ದುಡಿಯುವುದು, ರಸ್ತೆ ಬದಿಯಲ್ಲಿ ಚಿಂದಿ ಆಯುವುದು ಮುಂತಾದ ಕಡೆಗಳಲ್ಲಿ ಸಣ್ಣ ಮಕ್ಕಳು ದುಡಿಯುತ್ತಿರುವುದು ಸರ್ವೇಸಾಮಾನ್ಯವಾದ ಸಂಗತಿಯಾಗಿದೆ. ಇವುಗಳಿಗೆಲ್ಲಾ ಮುಖ್ಯ ಕಾರಣ ಬಡತನ. ಈ ಬಡತನದ ಹೊರೆ ಸಾಮಾನ್ಯವಾಗಿ ಕುಟುಂಬಗಳಲ್ಲಿ ಮಕ್ಕಳನ್ನೇ ಅತ್ಯಂತ ಹೆಚ್ಚಾಗಿ ಬಲಿ ತೆಗೆದುಕೊಳ್ಳುತ್ತಿದೆ.

ಮೈತ್ರೇಯಿ ಕೃಷ್ಣರಾಜ್ ಹಾಗೂ ನೀರಾ ದೇಸಾಯಿಯವರ ಪ್ರಕಾರ - ಸಾಮಾನ್ಯವಾಗಿ ನಾವು ೫-೧೪ ವರ್ಷದ ವಯೋಗುಂಪಿನ ಆಧಾರದ ಮೇಲೆ ಹೇಳುವುದಾದರೆ, ಸುಮಾರು ಶೇ. ೩೧ರಷ್ಟು ಹೆಣ್ಣುಮಕ್ಕಳು ದುಡಿಮೆಯಲ್ಲಿ ಭಾಗವಹಿಸುವುದು ಕಂಡುಬರುತ್ತದೆ. ಹಾಗೂ ಇವರು ತಮ್ಮ ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಕೆಲಸದಲ್ಲಿ ಸೇರಿಬಿಡುತ್ತಾರೆ. ಹೀಗಾಗಿ ಅವರ ಜೀವನದಲ್ಲಿ ದುಡಿಮೆಯ ಅವಧಿ ಅತ್ಯಂತ ಹೆಚ್ಚಾಗಿ, ಅವರು ಅತಿ ಬೇಗನೆ, ಶಕ್ತಿಹೀನರಾಗುವುದರ ಮೂಲಕ, ಪುರುಷರಿಗೆ ಹೋಲಿಸಿದಾಗ, ದುಡಿಮೆಯ ಕಾಲಾವಧಿ ಕಡಿಮೆಯಾಗುತ್ತದೆ" ಎಂಬುದಾಗಿ ಹೇಳುತ್ತಾರೆ.

ಕೆಲವೊಂದು ಅಧ್ಯಯನಗಳ ಪ್ರಕಾರ-ಗ್ರಾಮೀಣ ಪ್ರದೇಶದ ವ್ಯವಸಾಯ ನಿರತ ಕುಟುಂಬಗಳಲ್ಲಿ - ಒಬ್ಬ ಹೆಣ್ಣುಮಗಳು ದಿನಕ್ಕೆ ಸುಮಾರು ೧೯ ಗಂಟೆಗಳ ಕಾಲ ದುಡಿಯುತ್ತಾಳೆ. ೧ ವರ್ಷದಲ್ಲಿ ಆಕೆ ೩೦೦ ದಿನಗಳು ಕೆಲಸ ಮಾಡಿರುತ್ತಾಳೆ. ಇದರಿಂದ ಆ ಕುಟುಂಬಕ್ಕೆ ತಿಂಗಳಿಗೆ ೨೨೦೦/- ರೂ. ಆದಾಯವನ್ನು ಆ ಮನೆಗೆ ಉಳಿಸಿರುತ್ತಾಳೆ. (ಕೂಲಿ ರೂಪದಲ್ಲಿ ಲೆಕ್ಕ ಹಾಕಿದಾಗ) ಹಾಗೆ ಸುಮಾರು ೩೦,೦೦೦ ರೂ.ಗಳು ಒಂದು ವರ್ಷದಲ್ಲಿ ಒಬ್ಬ ಹೆಣ್ಣುಮಗಳಿಂದ ಉಳಿಸಲ್ಪಡುತ್ತದೆ, ಎಂಬುದಾಗಿ ಅಂದಾಜು ಮಾಡಲಾಗಿದೆ. ಹೀಗೆ ಒಬ್ಬ ಹೆಣ್ಣುಮಗಳು ತನ್ನ ಮದುವೆ ವಯಸ್ಸು ೧೮ ರಿಂದ ೨೦ ವರ್ಷಗಳ ವರೆಗೂ ಆಕೆ ಆ ಕುಟುಂಬಕ್ಕೆ ತನ್ನ ದುಡಿಮೆಯನ್ನು ಮಾಡುತ್ತಿರುತ್ತಾಳೆ. ಇಷ್ಟು ಮಾಡಿದರೂ, ಮನೆಯಲ್ಲಿ ಹೆಣ್ಣುಮಕ್ಕಳು ಹುಟ್ಟಿದಾಗ ಮೂಗು ಮುರಿಯುವವರೇ ಹೆಚ್ಚು. ಮನೆಗಳಲ್ಲಿ ಸಣ್ಣಮಕ್ಕಳನ್ನು ನೋಡಿಕೊಳ್ಳುವುದು ವಯಸ್ಸಾದವರನ್ನು ನೋಡಿಕೊಳ್ಳುವುದು, ಹೊಲದಲ್ಲಿ ದುಡಿಯುವವರಿಗೆ

ಊಟದ ತಯಾರಿ, ಮನೆಯಲ್ಲಿ ದನಕರುಗಳೇನಾದರೂ ಇದ್ದಲ್ಲಿ, ಅವುಗಳಿಗೆ ಕಾಲಕಾಲಕ್ಕೆ ಹುಲ್ಲು ಹಾಕುವುದು, ನೀರು ಕುಡಿಸುವುದು, ಬೆಳಗ್ಗೆ ಸಾಯಂಕಾಲದ ಅಡಿಗೆಗೆ ಸೌದೆ (ಉರುವಲು)ಗಳನ್ನು ಒಣಗಿಸಿ ಜೋಡಿಸಿಕೊಳ್ಳುವುದು- ಇವೆಲ್ಲವೂ ಸಹ ಹೆಣ್ಣುಮಕ್ಕಳಿಂದಲೇ ನಡೆಯುವಂತಹ ಕೆಲಸಗಳಾಗಿವೆ. ಈ ಎಲ್ಲಾ ಕೆಲಸಗಳೂ ಒಂದು ರೀತಿಯಲ್ಲಿ 'ಆದಾಯರಹಿತ' ಹಾಗೂ ಅಷ್ಟೇ ಶ್ರಮದಾಯಕವಾದರೂ ಅವು ಅವರ ಪಾಲಿಗೆ 'ಅಗೋಚರ'ವಾಗಿಯೇ ಕಂಡುಬರುವಂತಹವು. ಅಲ್ಲದೆ ಆಯಾಯ ಕಾಲದಲ್ಲಿ ಬೆಳೆದ ಕಾಳುಕಡ್ಡಿ, ಬೀಜಗಳನ್ನು ಬಿಸಿಲಿನಲ್ಲಿ ಒಣಗಿಸಿ ಒಪ್ಪ ಓರಣ ಮಾಡುವುದು ಇಂತಹ ಕೆಲಸಗಳು - ಮನೆ ಕೆಲಸ ಜೊತೆಗೇ ಸಾಗುತ್ತಿರುತ್ತವೆ.

ಮತ್ತೊಂದು ಕಡೆ - ಗೃಹ ಉದ್ದಿಮೆಯ ಕುಟುಂಬಗಳಲ್ಲಿ ಹೆಣ್ಣುಮಕ್ಕಳ ದುಡಿಮೆಯನ್ನು ಪ್ರಮುಖವಾಗಿ ಕಾಣುತ್ತೇವೆ. ಬೀಡಿ ಮಾಡುವುದು, ಗಂಧದ ಕಡ್ಡಿ, ರೇಷ್ಮೆದಾರ ತೆಗೆಯುವುದು, ರೇಷ್ಮೆ ಸಾಕಾಣಿಕೆ, ಚಾಪೆ ಎಣೆಯುವುದರಲ್ಲಿ ಬಣ್ಣ ಹಾಕುವುದು, ಕಡ್ಡಿ ಒಣಗಿಸುವುದು, ಹೀಗೆ ಹತ್ತು ಹಲವು ಕೆಲಸಗಳು ಹೆಣ್ಣುಮಕ್ಕಳ - ಮಹಿಳೆಯರ ಪಾಲಿಗೇ ಸೇರುತ್ತವೆ.

೧೯೭೧ರ ರಾಷ್ಟ್ರೀಯ ಜನಗಣತಿಯ ಪ್ರಕಾರ ೧೫ ವರ್ಷದೊಳಗಿನ ದುಡಿಯುವ ಮಕ್ಕಳು - ೧೦.೭೪ ದಶಲಕ್ಷಗಳಷ್ಟಿದ್ದಾರೆ ಎಂಬುದಾಗಿ ತಿಳಿದುಬರುತ್ತದೆ.

೧೯೭೫ರಲ್ಲಿ ನಡೆಸಿದ ILO ಸಮೀಕ್ಷೆಯ ಪ್ರಕಾರ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರತಿ ೫ನೇ ಮಗು ದುಡಿಯುವ ಮಗುವಾಗಿದೆ. ಹೀಗೆ ಭಾರತದಲ್ಲಿ ಒಟ್ಟು ೧೫.೧ ದಶಲಕ್ಷ ಬಾಲಕಾರ್ಮಿಕರಿದ್ದಾರೆ ಎಂದು ತಿಳಿದುಬರುತ್ತದೆ.

೧೯೮೩ರ ಯೋಜನಾ ಆಯೋಗದ ವರದಿಯ ಪ್ರಕಾರ - ಸುಮಾರು - ೧೭.೩೬ ದಶಲಕ್ಷಗಳು.

೧೯೯೪ರಲ್ಲಿ ನಡೆಸಿದ - ಕಾರ್ಮಿಕ ಇಲಾಖೆಯವರ ಅಂಕಿ-ಅಂಶಗಳ ಪ್ರಕಾರ - ಭಾರತದಲ್ಲಿರುವ ಬಾಲಕಾರ್ಮಿಕರ ಸಂಖ್ಯೆ ೨೦ ದಶಲಕ್ಷಗಳು.

ಹೀಗೆ ಬಾಲಕಾರ್ಮಿಕರು ದೇಶದ ಗ್ರಾಮ ಮತ್ತು ನಗರಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ದುಡಿಯುವವರಾಗಿದ್ದಾರೆ. ಅದರಲ್ಲೂ ಅಸಂಘಟಿತ ಕ್ಷೇತ್ರಗಳಲ್ಲಿ ಇವರ ಪಾತ್ರ ಅತ್ಯಂತ ಹೆಚ್ಚಾಗಿದೆ. ಉದ್ಯೋಗಗಳ ಕೊರತೆ, ಮತ್ತು ಅಸಮರ್ಪಕ ವೇತನ ಇವುಗಳು ಗ್ರಾಮೀಣ ಮಹಿಳೆಯರನ್ನು ಮತ್ತು ಮಕ್ಕಳನ್ನು ಉದ್ಯೋಗ ಕ್ಷೇತ್ರಕ್ಕೆ ತಮ್ಮ ಶ್ರಮವನ್ನು ಮಾರಾಟ ಮಾಡುವಂತೆ ಪ್ರೇರೇಪಿಸುತ್ತದೆ. ಅತ್ಯಂತ ಹೆಚ್ಚಿನ ಕೆಲಸಗಳು ವ್ಯವಸಾಯ ಕ್ಷೇತ್ರದಲ್ಲಿ ಮಕ್ಕಳಿಂದ ಸಮರ್ಥವಾಗಿ ನಿರ್ವಹಿಸಲ್ಪಡುತ್ತವೆ. ಬೇರುಗಳನ್ನು ಅಗೆದು ಸೌದೆ ಮಾಡುವುದು, ನೆಲ ಹದ ಮಾಡುವುದು, ಹುಲ್ಲು ಕುಯ್ದು ತರುವುದು, ಹಣ್ಣುಗಳನ್ನು ಆರಿಸುವುದು, ಬೆಳೆಯನ್ನು ಕಾಯುವುದು, ಆಡು, ಕುರಿ, ಹಸು, ಎಮ್ಮೆಗಳನ್ನು ಮೇಯಿಸುವುದು, ಕೆಲಸ ಮಾಡುವ ಸ್ಥಳಗಳಿಗೆ ಊಟ ಕೊಂಡೊಯ್ಯುವುದು. ಇನ್ನು ಮುಂತಾದ ಕೆಲಸಗಳು ಮುಖ್ಯವಾಗಿ ಮಕ್ಕಳಿಂದಲೂ (ಗಂಡು+ಹೆಣ್ಣು) ಎನ್ನದೆ ನಿರ್ವಹಿಸಲ್ಪಡುತ್ತವೆ.

ಕೆಲವು ಸಮೀಕ್ಷೆಗಳ ಪ್ರಕಾರ - ಒಂದು ವರ್ಷದಲ್ಲಿ ಮಕ್ಕಳು ಸರಾಸರಿ ೨೧೧ ದಿನಗಳಷ್ಟು ಗ್ರಾಮೀಣ ಪ್ರದೇಶಗಳಲ್ಲಿ (ಹೊಲದಲ್ಲಿ) ಬಾಲಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಾರೆ ಎಂದು ತಿಳಿದುಬರುತ್ತದೆ.

ಎಂ. ಕುಮಾರೇಸನ್ ಎಂಬುವರ ಅಧ್ಯಯನದ ಪ್ರಕಾರ - the girl child labour in agriculture ಪ್ರಕಾರ ಬಿತ್ತನೆ ಮಾಡುವುದು, ನಾಟಿ ಮಾಡುವುದು ಕೊಯ್ಯುವುದು ಮುಂತಾದವುಗಳನ್ನು ಮಾಡುತ್ತಾರೆ. ಅವರ ಪ್ರಕಾರ ಮಹಿಳೆಯರ ಶ್ರಮ ಅಗ್ಗದ ಶ್ರಮ. ಅವರ ದುಡಿಮೆ ಪ್ರತಿಫಲ ಕುಟುಂಬಕ್ಕೆ ತಲುಪುತ್ತದೆ. ಶ್ರಮದಾಯಕ ಕೆಲಸಗಳನ್ನು ಅವರು ಮಾಡಿದರೂ ಯೋಗ್ಯವಾದ ಸೌಲಭ್ಯಗಳನ್ನು ಅವರು ಪಡೆಯುವುದಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಹೆಣ್ಣುಮಕ್ಕಳು ದುಡಿಮೆಯ ಎತ್ತುಗಳಾಗಿ ಕಾಣುತ್ತಾರೆ.

ಹಲವಾರು ಉದ್ದಿಮೆಗಳು ಸ್ತ್ರೀಯರನ್ನು ನೇಮಕ ಮಾಡಿಕೊಳ್ಳುವಲ್ಲಿ ಆದ್ಯತೆಯನ್ನು ನೀಡುತ್ತವೆ. ರೇಷ್ಮೆ ತೆಗೆಯುವುದು, ಗೋಡಂಬಿ ಕಾರ್ಖಾನೆ, ಆಹಾರ ಸಂಸ್ಕರಣೆ, ಮುಂತಾದ ಕ್ಷೇತ್ರಗಳಲ್ಲಿ ಸ್ತ್ರೀಯರನ್ನು ನೇಮಕ ಮಾಡಿಕೊಳ್ಳಲು ಅವರದೇ ಕಾರಣಗಳನ್ನು ನೀಡಲಾಗುತ್ತಿದೆ.

ಸ್ತ್ರೀಯರು ಪ್ರತಿಭಟನೆಯನ್ನು ತೋರದೆ, ವಿಧೇಯತೆಯಿಂದ ಕೆಲಸ ಮಾಡುತ್ತಾರೆ.

ಮೃದು ಸ್ವಭಾವವುಳ್ಳವರು, ಕೆಲಸದಲ್ಲಿ ಶ್ರದ್ಧೆ ನಿಷ್ಠೆ, ಆಸಕ್ತಿಯುಳ್ಳವರು ದುಡಿದ ಹಣವನ್ನು ತಂದೆ-ತಾಯಿಯರಿಗೆ ನೀಡುತ್ತಾರೆ. ದೊಡ್ಡವರು ಹೇಳುವ ಮಾತನ್ನು ಕೇಳುವುದಿಲ್ಲ. ವಿದ್ಯೆ ಕಲಿತರೆ ಮಕ್ಕಳು ಕೈಗೆ ಸಿಗುವುದಿಲ್ಲ, ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳನ್ನು ದಾರಿಗೆ ತರಬಹುದು, ಕುಟುಂಬಕ್ಕೆ ಆದಾಯವನ್ನು ತರುತ್ತಾರೆ.

ಬಡತನ ಹಾಗೂ ಅನಿವಾರ್ಯತೆಯಿಂದಾಗಿ ತಂದೆ ತಾಯಿಗಳು ಮಕ್ಕಳನ್ನು ದುಡಿಯಲು ನೇಮಿಸುತ್ತಾರೆ. ಕೆಲಸಕ್ಕೆ ಮಕ್ಕಳನ್ನು ಹುಡುಕಿಕೊಡುವುದರಲ್ಲಿ ದಳ್ಳಾಳಿಗಳು ಪ್ರಮುಖ ಪಾತ್ರವಹಿಸುತ್ತಾರೆ. ಹೀಗೆ ಕಾರ್ಖಾನೆ ಉದ್ಯಮಿಗಳ ಹಾಗೂ ಮಾಲೀಕರ, ಭೂಮಾಲೀಕರ, ಸಮರ್ಥನೆಗಳು ಒಂದು ಕಡೆಯಾದರೆ - ಬಡತನದ ಬವಣೆಯಿಂದ ತತ್ತರಿಸುವ ಕುಟುಂಬಗಳ ಪರಿಸ್ಥಿತಿ, ಹಾಗೂ ಮನೆಯಾಧಾರಿತ Housebased ಕಸುಬುಗಳಾದ - ಗಂಧದ ಕಡ್ಡಿ ತಯಾರಿಕೆ, ಬೀಡಿ, ಸಿಗರೇಟು ತಯಾರಿಕೆ, ಮೇಣದ ಬತ್ತಿ, ಮುಂತಾದವುಗಳಲ್ಲಿ ಕೆಲಸ ಮಾಡುವಂತಹ, ಅದರಲ್ಲೂ ಮಕ್ಕಳ, ಮಹಿಳೆಯರ ಮೇಲೆ ನಡೆಯುವ ಶೋಷಣೆಗಳು, ಅನ್ಯಾಯಗಳು, ದೌರ್ಜನ್ಯಗಳು, ಮತ್ತೊಂದು ರೀತಿಯ ನೋಟವನ್ನೇ ನೀಡುತ್ತವೆ. ಇಂತಹ ಕುಟುಂಬಗಳಲ್ಲಿನ ಮಕ್ಕಳು, ತಮ್ಮ ಕುಟುಂಬದ ಪರಿಸ್ಥಿತಿಗೆ ಹೊಂದಿಕೊಂಡು, ತಮ್ಮ ಆಸೆ - ಆಕಾಂಕ್ಷೆಗಳನ್ನು ಬದಿಗೊತ್ತಿ, ತಮ್ಮ ವ್ಯಕ್ತಿತ್ವದ ಬೆಳವಣಿಗೆಗೆ ಕಡಿವಾಣಗಳನ್ನು ಹಾಕಿಕೊಂಡು, ಉಜ್ವಲ ಭವಿಷ್ಯದ ಕನಸು ಕಾಣುತ್ತಾ ತಮ್ಮ "ಬದುಕೇ ದುಡಿಮೆ, ದುಡಿಮೆಯೇ ಬದುಕು" ಎಂಬುದಾಗಿ - ಹೇಳುವಂತಹ ಹಲವಾರು "ಬಾಲಕಾರ್ಮಿಕರ" ಒಂದು ಸಮಗ್ರ ಅಧ್ಯಯನದ ಮಹಿತಿಗಳನ್ನು ಈ ಮುಂದೆ ನೋಡುವಾ......

ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ಗ್ರಾಮಗಳ ಹಾಗೂ ಪಟ್ಟಣಗಳಲ್ಲಿ ಪ್ರಮುಖವಾದ ಒಂದು ಉದ್ಯಮವೆಂದರೆ - ಬೀಡಿ ಉದ್ಯಮ. ಸುಮಾರು ೩ ಲಕ್ಷಕ್ಕಿಂತ ಹೆಚ್ಚಿನ ಮಕ್ಕಳು ಹಾಗೂ ಮಹಿಳೆಯರು ಈ ಉದ್ಯಮದಲ್ಲಿ ನಿರತರಾಗಿದ್ದಾರೆ. ಇವರು ಮುಖ್ಯವಾಗಿ - ಎಲೆ ಕತ್ತರಿಸುವುದರಿಂದ ಹಿಡಿದು, ದಾರ ಹಾಕುವುದು, ಅಂಚುಗಳನ್ನು ಮಡಚುವುದು, ಅವುಗಳಿಗೆ ದಾರ ಸುತ್ತುವುದು, ದಾರ ಸುತ್ತಿ ತಯಾರಾದ ಬೀಡಿಗಳನ್ನು ಎಣಿಸಿ, ಮತ್ತೊಂದು ಕಟ್ಟುಗಳನ್ನಾಗಿ ಮಾಡುವುದು. ಹೀಗೆ ಪ್ರತಿ ಕುಟುಂಬಗಳಲ್ಲೂ ಕೆಲಸವನ್ನು ಹಂಚಿಕೊಂಡು, ಹಂತಹಂತವಾಗಿ ಬೀಡಿ ತಯಾರಿಸಿ, ವಾರಕ್ಕೆ ೧ ಅಥವಾ ೨ ಸಾರಿ ಆ ಗ್ರಾಮಕ್ಕೆ ಬಂದು ಬೀಡಿಗಳನ್ನು ಕೊಂಡೊಯ್ಯುವ ಏಜೆಂಟರುಗಳು ಅಥವಾ ದಳ್ಳಾಳಿಗಳಿಗೆ - ಹೋಗಿ ಬೀಡಿಗಳನ್ನು ಎಣಿಸಿ ಅವರಿಗೆ ಕೊಟ್ಟು, ನಂತರ ಹಣವನ್ನು ಪಡೆದು, ಜೊತೆಗೆ, ಮತ್ತೆ ಬೀಡಿಗಳನ್ನು ತಯಾರಿಸಲು - ಕಚ್ಚಾ ವಸ್ತುಗಳನ್ನು ಅವರಿಂದ ಪಡೆದು ಮನೆಗೆ ತರುವ ಕೆಲಸವು ಮುಖ್ಯವಾಗಿ ಹೆಣ್ಣುಮಕ್ಕಳದೇ. ಇದಕ್ಕಾಗಿಯೇ ಶಾಲೆ ಬಿಟ್ಟ ಮಕ್ಕಳು, ಹಾಗೂ ಶಾಲೆಗೆ ಹೋಗುವ ಮಕ್ಕಳೂ ಕೂಡ ಈ ಕೆಲಸವನ್ನು ಮಾಡುವವರಾಗಿದ್ದಾರೆ.

ಹೀಗೆ ಶಾಲೆ ಬಿಡಲು ಪ್ರಮುಖ ಕಾರಣಗಳೆಂದರೆ ಅವರ ಅಭಿಪ್ರಾಯದಲ್ಲಿ ಬಡತನ ಪ್ರಮುಖ ಕಾರಣವಾದರೆ, ಶೇ. ೩೧ರಿಂದ ೩೪ ರಷ್ಟು ಮಕ್ಕಳು - ಕುಟುಂಬದ ಆದಾಯ ಸರಿದೂಗಿಸಲು ಶಾಲೆ ಬಿಟ್ಟರೆಂದು ತಿಳಿಯುತ್ತದೆ. ಶೇ. ೯ ರಷ್ಟು ಮಕ್ಕಳು - ಶಾಲೆಗೆ ಹೋಗಲೂ ಇಷ್ಟ ಇಲ್ಲವೆಂದೇ ಹೇಳಿದರೆ - ಉಳಿದವರು ಹಲವಾರು ಕಾರಣಗಳಿಂದಾಗಿ ಶಾಲೆ ಬಿಟ್ಟವರಿದ್ದಾರೆ. ತಂದೆ ತಾಯಿಯರ ಅಭಿಪ್ರಾಯದಲ್ಲಿ ತಿಳುವಳಿಕೆಗೆ ಸ್ವಲ್ಪ ಓದಿದರೆ ಸಾಕು ಮಕ್ಕಳು ಬೀಡಿ ಸುತ್ತುವುದರಲ್ಲಿ ಪರಿಣತರಾದರೆ - ಅವರಿಗೆ ಹೆಚ್ಚು ಹಣ ಸಂಪಾದನೆ ಮಾಡಲು ಆಗುತ್ತದೆ, ಮದುವೆ ಮುಂಜಿಗೆ ಅನುಕೂಲ.

ಹೀಗೆ ಹಲವಾರು ಮಕ್ಕಳು ಬಡತನದ ಕಾರಣವಾಗಿ ಅವರು ಕುಟುಂಬದ ಭಾರ ಹೊತ್ತಿರುವಂತಹ ಹಲವಾರು ಹೆಣ್ಣುಮಕ್ಕಳನ್ನು ಖುದ್ದಾಗಿ ಮಾತನಾಡಿಸಿದಾಗ ಅವರ ಆರೋಗ್ಯದ ಬಗ್ಗೆ ಕೇಳಿದಾಗ - ತಿಳಿದುಬಂದಂತಹ ಅಂಶಗಳೆಂದರೆ, ಬೀಡಿ ಸುತ್ತುವುದರಿಂದ, ಅವರು - ತಲೆನೋವು, ತಲೆ ತಿರುಗು, ಜ್ವರ, ಮೈಕೈ ನೋವು, ಕೀಲುಗಳ ನೋವು, ಕಣ್ಣುಗಳ ಉರಿತ, ಉಗುರುಗಳ ನೋವು, ಚರ್ಮದ ಬಣ್ಣ ಬದಲಾವಣೆ, ಬೆನ್ನುನೋವು, ಕೆಲವರು ಅಸ್ತಮಾ ರೋಗಗಳು, ಮತ್ತೆ ಕೆಲವರು T. B. ಖಾಯಿಲೆಯಿಂದ ನರಳುವವರಾಗಿ ತಿಳಿದುಬರುತ್ತದೆ.

ಹೀಗಿದ್ದರೂ ಸಹ ಅವರು ಆಸ್ಪತ್ರೆಗಳಿಗಾಗಲೀ, ಡಾಕ್ಟರ ಹತ್ತಿರವಾಗಲೀ ಹೋಗಿ ತೋರಿಸಿಕೊಳ್ಳುವಲ್ಲಿ ಹಿಂಜರಿಯುತ್ತಾರೆ - ಏಕೆಂದರೆ ಆ ಒಂದು - ಎರಡು ದಿನಗಳು ಆಸ್ಪತ್ರೆಗೆ ಹೋದರೆ - ಬೀಡಿ ಸುತ್ತುವ ಕೆಲಸ ನಿಂತುಹೋಗುತ್ತದೆ, ಆ ಸಮಯದಲ್ಲಿ ಸಾವಿರಾರು ಬೀಡಿಗಳನ್ನು ಕಟ್ಟಬಹುದು. ಎನ್ನುವಂತಹ ಅಭಿಪ್ರಾಯಗಳು ಇಲ್ಲದಿಲ್ಲ.

ಇಂತಹ ಹಲವಾರು ಬಾಲಕಾರ್ಮಿಕರನ್ನು ನೋಡಿದಾಗ ಕೆಲವು ಕುಟುಂಬಗಳಲ್ಲಿ ತೀರಾ ಕಡುಬಡತನವಿದ್ದು, ಇರಲು ತಮ್ಮದೇ ಆದ ಒಂದು ಸ್ವಂತ ಮನೆ ಕೂಡಾ ಇಲ್ಲದಿರುವುದು, ಜೋಪಡಿಗಳಲ್ಲಿ ವಾಸ, ದಿನನಿತ್ಯದ ಹೊಟ್ಟೆಪಾಡಿಗಾಗಿ ಹಗಲೂ ರಾತ್ರಿ, ನಿದ್ದೆಗೆಟ್ಟು, ಬೀಡಿ ಸುತ್ತುವುದನ್ನು, ನಾವು ಕಾಣುತ್ತೇವೆ. ಬೆಳಗ್ಗೆ ಒಂದು ಊಟ- ಮತ್ತೆ ಪುನಃ ರಾತ್ರಿ ಒಂದು ಊಟ - ವಿವಿಧ ರೀತಿಯ ತರಕಾರಿಗಳ ಉಪಯೋಗವಾಗಲೀ, ಹಣ್ಣು ಹಂಪಲುಗಳ ಉಪಯೋಗವಾಗಲೀ ಈ ಸಂಸಾರಗಳಲ್ಲಿ ಕನಸಿನ ಮಾತೇ ಸರಿ...

ಅಡಿಗೆ ಕೆಲಸದ ಜೊತೆಗೇ ಕೂಲಿ ಕೆಲಸವನ್ನು ಕೂಡ ಮಾಡುವಂತಹ ಕುಟುಂಬಗಳಲ್ಲಿ ಮುಖ್ಯವಾಗಿ ಹೆಣ್ಣುಮಕ್ಕಳೇ ಸಂಪೂರ್ಣ

ಬೀಡಿ ಸುತ್ತುವ ಕೆಲಸ ಕಂಡುಬರುತ್ತದೆ. ಸಣ್ಣ ಮಕ್ಕಳನ್ನು ನೋಡಿಕೊಳ್ಳಬೇಕಾಗುತ್ತದೆ. ಬರುವಂತಹ ಹಣದಿಂದ - ಅಕ್ಕಿ, ಬೇಳೆ, ಈರುಳ್ಳಿ, ತರಾಕರಿ, ಮೀನು, ಮುಂತಾಗಿ, ಆಹಾರದ ಸಾಮಾನುಗಳನ್ನು, ಬೀಡಿಕೊಟ್ಟು ಹಣ ತೆಗೆದುಕೊಂಡು ಬರುವಾಗಲೇ ಸಾಮಾನ್ಯವಾಗಿ ಕೊಂಡು ತರುತ್ತಾರೆ.

ಈ ಅಧ್ಯಯನದ ಪ್ರಕಾರ ಶೇ. ೮೫ಕ್ಕಿಂತಲೂ ಹೆಚ್ಚು ಕುಟುಂಬಗಳಲ್ಲಿನ ಉದ್ಯೋಗ ಬೀಡಿ ಸುತ್ತುವುದೇ ಆಗಿದೆ. ಸುಮಾರು ೧೫ ವರ್ಷಗಳಿಂದಲೂ ಈ ಉದ್ಯೋಗವನ್ನು ಮಾಡುವರಾಗಿದ್ದಾರೆ. ಇದಕ್ಕೆ ಮುಖ್ಯ ಕಾರಣ - ನಿರುದ್ಯೋಗ - ಬಡತನ. ಇಂತಹ ಕುಟುಂಬಗಳಲ್ಲಿ ಇತರೆ ಆದಾಯದ ಮೂಲಗಳು ಇಲ್ಲವೆಂದೇ ಹೇಳಬಹುದು. ಪ್ರತಿ ಕುಟುಂಬದಲ್ಲೂ ಒಬ್ಬ ಬಾಲಕಾರ್ಮಿಕರ ಆದಾಯ ಸುಮಾರು ೨೫೦ರಿಂದ ೪೦೦ ರೂ.ಗಳೆಂದು ಅಂದಾಜು ಮಾಡಲಾಗಿದೆ. ೧೪ ವರ್ಷ ಕೆಳಪಟ್ಟ ವಯಸ್ಸಿನ ಮಕ್ಕಳಿಗೆ Pass book ಆಗಲಿ - ಅವರಿಗೆ Identify card ಆಗಲಿ ಕೊಡುವುದಿಲ್ಲ. ಕಾರಣ ಅವರಿಗೆ ವಯಸ್ಸಿನ ಮಿತಿ ಇರುವುದರಿಂದ ಅವರೆಲ್ಲರೂ ಲೆಕ್ಕದಲ್ಲಿ ಬರುವುದಿಲ್ಲ. ಆದರೆ ಆ ಕುಟುಂಬಕ್ಕೆ ಅವರಿಂದಲೂ ಆದಾಯ ಸಲ್ಲುತ್ತಿದೆ.

ಬೀಡಿ ಏಜೆಂಟರುಗಳಿಂದ, ಕಂಟ್ರಾಕ್ಟರುಗಳಿಂದ - ಅನೇಕ ಸಮಸ್ಯೆಗಳನ್ನು, ಮೋಸಗಳನ್ನು ಅವರು ಎದುರಿಸಬೇಕಾಗುತ್ತದೆ. ಆದರೂ ಅವರೆದುರು ಪ್ರಶ್ನೆ ಮಾಡಲು ಮಕ್ಕಳು ಹೆದರುತ್ತಾರೆ.

೧. ಏಜೆಂಟರುಗಳು ಕೊಡುವ ಬೀಡಿ ಸುತ್ತುವ ಎಲೆ - ಹಾಗೂ ತಂಭಾಕಿನ ತೂಕದ ಸಂದರ್ಭದಲ್ಲಿ ಮೋಸ ಮಾಡುವುದು.

೨. ತೂಕದಲ್ಲಿ ವ್ಯತ್ಯಾಸವಾದಾಗ ಸರಿಯಾದ ಸಂಖ್ಯೆಯ ಬೀಡಿಗಳನ್ನು ಮಾಡಲಾಗುವುದಿಲ್ಲ. ಆಗ ಅವರು ತಮ್ಮ ಕೈಯಿಂದ ಹಣ ಕೊಟ್ಟು ತಂಬಾಕು ಅಥವಾ ಎಲೆ ತಂದು - ಅವರು ಹೇಳಿದ ಸಂಖ್ಯೆಯಲ್ಲಿ ಬೀಡಿ ಕೊಡಬೇಕಾಗುತ್ತದೆ.

೩. ಮತ್ತೂ ಕಿರಿ ಕಿರಿ ಮಾಡಬೇಕೆಂದರೆ - ಅವರು ಕೊಟ್ಟ ಬೀಡಿಗಳನ್ನು ಪರೀಕ್ಷಿಸಿ - ಸುತ್ತಿರುವುದು ಸರಿಯಿಲ್ಲವೆಂದೂ, ತಂಬಾಕು ಸರಿಯಾಗಿ ಹಾಕಿಲ್ಲವೆಂದೂ ಯಾವುದಾದರೊಂದು ಕೊಂಕು ತೆಗೆದು ಬೀಡಿಗಳನ್ನು ಹೊರಗೆ ಬಿಸಾಡುವುದು.

೪. ಮಹಿಳೆಯರ ಹೆಸರಿನಲ್ಲಿ ಖುದ್ದಾಗಿ Pass Book ಕೊಡುವುದಿಲ್ಲ - ಏಕೆಂದರೆ ಅವರು Pass Bookನಲ್ಲಿ ಹೆಸರು ನೋಂದಾಯಿಸಿದಾಗ - ಸರ್ಕಾರದ ಕಾನೂನಿನ ರೀತ್ಯ ಅವರಿಗೆ ಸೌಲಭ್ಯಗಳನ್ನು ನೀಡಬೇಕಾಗುತ್ತದೆಂಬ ಕಾರಣಗಳಿಂದಾಗಿ ಅವರ ಹೆಸರಿನಲ್ಲಿ Pass Book ಬರೆಯುವುದಿಲ್ಲ. ಇಂತಹ ಹಲವಾರು ರೀತಿಯ ಮೋಸಗಳನ್ನಾಗಲಿ, ಸಮಸ್ಯೆಗಳನ್ನಾಗಲಿ ಹೆಣ್ಣುಮಕ್ಕಳು - ಹೆಂಗಸರು ಬಾಯಿಬಿಟ್ಟು ಹೇಳಿಕೊಳ್ಳಲು ಹೆದರುತ್ತಾರೆ. ಸರ್ಕಾರದಿಂದ ಕೊಡಲ್ಪಡುವ ಹಲವಾರು ಅನುಕೂಲಗಳಾಗಲೀ - ಸೌಲಭ್ಯಗಳಾಗಲಿ - ಸಂಪೂರ್ಣವಾಗಿ ಇಂತಹ ಕಾರ್ಮಿಕರ ತಿಳುವಳಿಕೆಗೆ ಬಂದಿಲ್ಲದಿರುವುದರಿಂದ ಇವರು ಹಲವಾರು ರೀತಿಯಲ್ಲಿ ಮೋಸಕ್ಕೆ ಬಲಿಯಾಗುತ್ತಿರುವುದು ಕಂಡುಬರುತ್ತಿದೆ.

ಇತ್ತೀಚೆಗೆ - ಬೀಡಿ ಕಾರ್ಮಿಕರು ಸೇರಿ,ಸಂಘ ಸಂಸ್ಥೆಗಳನ್ನು ಮಾಡಿಕೊಂಡಿದ್ದಾರೆ. ಆ ಮೂಲಕ ಹೋರಾಟಕ್ಕೆ ಸಿದ್ಧರಾಗುತ್ತಿದ್ದಾರೆ. ಆದರೂ - ಮಹಿಳೆಯರ, ಹೆಣ್ಣು ಮಕ್ಕಳ ಸಮಸ್ಯೆಗಳು - ಹೊರನೋಟಕ್ಕೆ ಬಂದಿಲ್ಲ - ಕಾರಣ - ಸಂಘ ಸಂಸ್ಥೆಗಳ ಮುಂದಾಳತ್ವ ಬರೀ ಪುರುಷರೇ ಆಗಿರುವುದಿರಂದ ಇವರ ಸಮಸ್ಯೆಗಳು ಬೂದಿ ಮುಚ್ಚಿದ ಕೆಂಡ.

ಈ ಏಜೆಂಟರುಗಳಿಂದಾಗಲಿ - ಕಂಟ್ರಾಕ್ಟರುಗಳಿಂದಾಗಲಿ ಆದಂತಹ ಮೋಸಗಳನ್ನು ಹೇಳುವಂತಹ ಮಹಿಳೆಯರ ಮೇಲೆ ಹಾಗೂ ಅಂತಹ ಹೆಣ್ಣುಮಕ್ಕಳ ಮೇಲೆ ತೊಂದರೆ ಕೊಡುವಂತಹ ಸಂದರ್ಭಗಳು ಹೆಚ್ಚಾಗಿ ಕಂಡುಬರುತ್ತವೆ... ಅವುಗಳೆಂದರೆ -

- ಅಂತಹ ಮಹಿಳೆಯರ ಬಗ್ಗೆ ಕೆಟ್ಟ ವಿಚಾರಗಳನ್ನು ಹಬ್ಬಿಸುವುದು.
- ಅವರಿಗೆ ಕೊಡಬೇಕಾದ ಹಣ ಸಂದಾಯಮಾಡುವಲ್ಲಿ ನಿಧಾನ ಮಾಡುವುದು.
- ಅವರನ್ನು Black mail ಮಾಡುವುದು.
- ಅವರು ಮಾಡಿದ ಬೀಡಿಗಳಲ್ಲಿ ಅನಾವಶ್ಯಕ ತಪ್ಪುಗಳನ್ನು ಹುಡುಕಿ ಎಲ್ಲರ ಮುಂದೆ ಹೇಳುವುದು.

ಇಂತಹ ಸಂದರ್ಭಗಳಲ್ಲಿ ಅವರಿಗೆ (ಮಕ್ಕಳು+ಮಹಿಳೆಯರಿಗೆ) ಸರಿಯಾದ ತಿಳುವಳಿಕೆ ನೀಡಿ, ಅವರಿಗೆ ಕಾನೂನಿನ ರಕ್ಷಣೆಯನ್ನು ಹಾಗೂ ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ. ಇದಕ್ಕೋಸ್ಕರವೇ ಹಲವಾರು ಸಂಘ ಸಂಸ್ಥೆಗಳೂ ಇದ್ದಾಗ್ಯೂ ಮಹಿಳೆಯರು ಸದಸ್ಯತ್ವ ಪಡೆದಿರುತ್ತಾರಾದರೂ, ಅವರ ಭಾಗವಹಿಸುವಿಕೆ ತುಂಬಾ ಕಡಿಮೆ ಎಂದು ತಿಳಿದು ಬರುತ್ತದೆ.

ಇಂದು ಮಕ್ಕಳಿಗೆ ಶಿಕ್ಷಣ, ಸರಿಯಾದ ವೇತನ, ಮನೆ ಸೌಲಭ್ಯ, ಹೆರಿಗೆ ಭತ್ಯೆ, ರಜಾ ಸೌಲಭ್ಯಗಳಿಗಾಗಿ ಅವರು ಹೋರಾಡುತ್ತಿದ್ದಾರೆ. ಇಂತಹ ಹೋರಾಟಗಳು ಆದಷ್ಟು ಬೇಗ ಸಫಲವಾಗಬೇಕಾದರೆ, ಸರ್ಕಾರೇತರ ಸಂಘ ಸಂಸ್ಥೆಗಳ ಸಹಾಯ, ಯೂನಿಯನ್‌ಗಳ ಭದ್ರತೆ, ಕಾನೂನಿನ ರಕ್ಷಣೆ, ಹಾಗೂ ಕಡ್ಡಾಯವಾಗಿ, ಸುವ್ಯವಸ್ಥಿತವಾಗಿ ಸೌಲಭ್ಯಗಳನ್ನು ಒದಗಿಸುವ ಯೋಜನೆಗಳ ಮೂಲಕ ಕಾರ್ಮಿಕರಿಗೆ ತಲುಪುವಂತೆ ನೋಡಿಕೊಳ್ಳಬೇಕಾದ ಅವಶ್ಯಕತೆಯಿದೆ. Contracterಗಳಾಗಲಿ, ಏಜೆಂಟರುಗಳಾಗಲಿ ಮಾಡಿದ ಮೋಸಗಳನ್ನು ಧೈರ್ಯವಾಗಿ ಹೇಳುವಂತೆ ಆಗಬೇಕಾದರೆ - ಅವರಿಗೆ ಕಾನೂನಿನ, ಜೀವನದ ರಕ್ಷಣೆ ಒದಗಿಸಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಮಾತ್ರ ಈ ಸಮಸ್ಯೆಗಳು-ಮೋಸಗಳನ್ನು ತಡೆಗಟ್ಟಬಹುದಾಗಿದೆ. ಆಗ ಕಾರ್ಮಿಕರಿಗೆ ಅದರಲ್ಲೂ ಬಾಲಕಾರ್ಮಿಕರಿಗೆ ಪರವಾದ ಕಾನೂನಿನ ಅವಶ್ಯಕತೆ ಅತ್ಯಂತ ಹೆಚ್ಚಾಗಿದೆ.

ಈ ಒಂದು ನಿಟ್ಟಿನಲ್ಲಿ ಸರ್ಕಾರ, ಸರ್ಕಾರೇತರ ಸಂಸ್ಥೆಗಳು ಸಮಸ್ಯೆಗಳಿಗೆ ಅನುಗುಣವಾದ ರೀತಿಯಲ್ಲಿ ಕಾರ್ಯಕ್ರಮಗಳನ್ನು, ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಅವುಗಳಲ್ಲಿ ಕೆಲವು ಮುಖ್ಯವಾದ ಅಂಶಗಳನ್ನು ತೆಗೆದುಕೊಳ್ಳುವುದಾದರೆ :

- ಈಗಿರುವ ಕಾನೂನುಗಳು ಅದರಲ್ಲೂ ಬಾಲಕಾರ್ಮಿಕರ ಬಗ್ಗೆಯಿರುವ ಕಾನೂನುಗಳು ಆದಷ್ಟು ಅವರ ಅರಿವಿಗೆ ಹಾಗೂ ತಂದೆ ತಾಯಂದಿರ ಅರಿವಿಗೆ ಬರುವಂತೆ ಕಾರ್ಯಕ್ರಮಗಳನ್ನು, ಹಮ್ಮಿಕೊಳ್ಳಬೇಕಾಗಿದೆ. ಅದರಲ್ಲೂ ಕೂಡ ತರಬೇತಿಗಳು, ತಿಳುವಳಿಕೆ ಕಾರ್ಯಕ್ರಮಗಳು - ಮುಖ್ಯವಾಗಿ ತಂದೆ - ತಾಯಂದರಿಗೆ ತಲುಪುವಂತೆ ಮಾಡಬೇಕಾಗುತ್ತದೆ.
- ದೊಡ್ಡವರು ಆರ್ಥಿಕ ಸ್ವಾವಲಂಬಿಗಳಾಗಿ ಬದುಕಲು ಅವಕಾಶಗಳು ಹೆಚ್ಚಾಗಿದ್ದಲ್ಲಿ - ಸಣ್ಣ ಮಕ್ಕಳು ಆ ಕುಟುಂಬಗಳಲ್ಲಿ ಸಂಪಾದನೆಗೆ ಹೋಗಬೇಕಾದ ಸಂದರ್ಭಗಳು ಕಡಿಮೆಯಾಗುತ್ತದೆ.
- ತಂದೆ - ತಾಯಿಗಳಿಗೆ - ಹೆಣ್ಣಾಗಲಿ - ಗಂಡಾಗಲಿ - ಕಡ್ಡಾಯ ಶಿಕ್ಷಣವನ್ನು ಅವರಿಗೆ ಕೊಡಿಸಬೇಕೆಂಬ ನಿರ್ಬಂಧವನ್ನು ಹೇರಬೇಕಾಗುತ್ತದೆ.
- ಆದಷ್ಟು ಕಾರ್ಖಾನೆಗಳನ್ನು-ನಡೆಸುವ ಉದ್ಯಮಿಗಳು, ಮಾಲೀಕರುಗಳು ನಡೆಸುವ ಅನೇಕ ರೀತಿಯ ಶೋಷಣೆಗಳಿಗೆ ತಕ್ಕಂತೆ ದಂಡ ವಿಧಿಸುವುದು, ಕಾರ್ಖಾನೆಗಳನ್ನು ಮುಚ್ಚಿಸುವ ಹಾಗೂ ಅಂತಹ ಉದ್ಯಮಿಗಳಿಗೆ ಕಠಿಣವಾದ ಶಿಕ್ಷೆಗೆ ಗುರಿ ಪಡಿಸುವುದರ ಮೂಲಕ ಅವರಿಂದ ನಡೆಯುವ ಅನ್ಯಾಯಗಳನ್ನು ಕಡಿಮೆ ಮಾಡಬಹುದು.
- ಸರ್ಕಾರವು ಉದ್ಯಮಿಗಳು, ಮಾಲೀಕರ - ಕಂಟ್ರಾಕ್ಟರುಗಳ - ಏಜೆಂಟರುಗಳ ಕೆಲಸ - ಕಾರ್ಯಗಳ ಬಗ್ಗೆ ಆಗಾಗ್ಗೆ ನಿಗಾ ವಹಿಸಿ (checking) ಅವರನ್ನು ವಿಚಾರಣೆಗೆ ಒಳಪಡಿಸುವಲ್ಲಿ - ಇಂತಹ ಮಕ್ಕಳ ಮೇಲೆ ನಡೆಯುವ, ದೌರ್ಜನ್ಯಗಳು - ಶೋಷಣೆಗಳು - ಅವರು ಮಕ್ಕಳನ್ನು ನಡೆಸಿಕೊಳ್ಳುವ ರೀತಿ - ನೀತಿಯ ಬಗ್ಗೆ ಆಗಾಗ್ಗೆ ತಿಳುವಳಿಕೆ ನೀಡುವುದು ಅವಶ್ಯಕವೆಂಬುದಾಗಿ ಹೇಳಬಹುದು.

ಸೂಕ್ಷ್ಮವಾದ ಎಳೆಯ ಮಕ್ಕಳ ಮನಸ್ಸಿನಲ್ಲಿ ಸಕಾರಾತ್ಮಕ ಭಾವನೆಗಳು ಬೆಳೆಯುವಂತೆ ಮಾಡುವಲ್ಲಿ ಇವರೆಲ್ಲರ - ಜವಾಬ್ದಾರಿ ಅತ್ಯಂತ ಮುಖ್ಯವಾಗಿದೆ.

> *"ನನ್ನ ವಿದ್ಯಾರ್ಥಿ ದೆಸೆಯಲ್ಲಿ ಗಂಡು-ಹೆಣ್ಣಿನ ನಡುವಿರುವ ಅಸಮಾನತೆಯನ್ನು ಕಂಡು ತಲ್ಲಣಗೊಂಡಿದ್ದೆ. ಈ ಅಸಮಾನತೆ, ಅಂತಸ್ತು, ಸ್ಥಾನ ಮೀರಿ ಪೌಷ್ಟಿಕತೆಗೂ ಇಳಿದಿರುವುದು ನನಗೆ ಅರಿವಾದದ್ದು ಕ್ಷಾಮ ಕುರಿತು ಅಧ್ಯಯನ ನಡೆಸಿದಾಗ. ಹೆಣ್ಣು ಮಕ್ಕಳಿಗಿಂತ ಗಂಡು ಮಕ್ಕಳಿ ಹೆಚ್ಚಿನ ವೈದ್ಯಕೀಯ ಸೇವೆ ಹಾಗು ಇತರೆ ಸೌಲಭ್ಯಗಳನ್ನು ಅನುಭವಿಸುತ್ತಾರೆ. ಇದರಿಂದಾಗಿ ಸಾವಿನ ಸಂಖ್ಯೆಯಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ಈ ಲಿಂಗ ಅಸಮಾನತೆಯ ಪ್ರಕ್ರಿಯೆಯೆ ಸದ್ದಿಲ್ಲದೆ ನಡೆಯುವ ಹಿಂಸೆ"*
>
> *- ಅಮಾರ್ತ್ಯಸೇನ್*

‘ಕ್ಷಣಿಕವಲ್ಲದ ಕ್ಷಣಗಳು’

ಮಾಲತಿಯವರ ಕವನ ಸಂಕಲನ “ಕ್ಷಣಿಕವಲ್ಲದ ಕ್ಷಣಗಳು” ಈ ಕಾಲದ ಮಹಿಳೆಯರ ಅನೇಕ ಸಮಸ್ಯೆಗಳಿಗೆ ಮುಖಾಮುಖಿಯಾಗಿರುವುದರಿಂದ ಹೆಚ್ಚು ಪ್ರಸ್ತುತವೆನಿಸುತ್ತದೆ. ವಾಚ್ಯವಾಗಿರುವುದು, ಸಾಂಕೇತಿಕವಾಗಿಲ್ಲದಿರುವುದು ಈ ಕವನ ಸಂಕಲನದ ಮುಖ್ಯ ಮಿತಿ ಎಂಬುದು ನಿಜವಾದರೂ ಆಧುನಿಕ ಮಹಿಳಾ ಕಾವ್ಯ ಎದುರಿಸುತ್ತಿರುವ ಬಿಕ್ಕಟ್ಟು ಕೂಡ ಇದು ಎನ್ನಿಸುತ್ತಿದೆ. ಸಮಸ್ಯೆಯ ಬೇರೆ ಬೇರೆ ಆಯಾಮಗಳಿಗೆ, ಸಂಕೀರ್ಣತೆಗಳಿಗೆ, ತೆರೆದು ಹೇಳಿರಲಾರದ ಭಾವನೆಗಳಿಗೆ ಸ್ಪಂದಿಸುವ ಮನಸ್ಸಿಗೆ, ಹೊಸ ಆಯಾಮಗಳನ್ನು ಬಿಚ್ಚಿ ಇಡುವಾಗ - ಹೀಗೆ ತೆರೆದಿಡುವುದೇ ಮುಖ್ಯವಾಗಿಬಿಡುತ್ತದೆ. ಇಂತಹ ಕವನ ಸಂಕಲನಗಳಲ್ಲಿ ‘ಸಾಂಕೇತಿಕತೆ’ - ಮಾಯವಾಗಿರುವುದಕ್ಕೂ ಹಾಗೂ ಕವನಗಳು ಮುಖಾಮುಖಿಯಾಗುವ ಸಮಸ್ಯೆಗಳ ಸಂಕೀರ್ಣತೆಗೂ ಇರುವ ಸಂಬಂಧದ ಬಗ್ಗೆ ಕೂಡಾ ‘ಕ್ಷಣಿಕವಲ್ಲದ ಕ್ಷಣಗಳು’ ಯೋಚಿಸುವಂತೆ ಮಾಡುತ್ತದೆ.

ಈ ಕವನ ಸಂಕಲನದಲ್ಲಿ ಹೆಣ್ಣೊಬ್ಬಳ ಆತಂಕದ ಚಿತ್ರಣವಿದೆ. ವೈವಾಹಿಕ, ಕೌಟುಂಬಿಕ ಚೌಕಟ್ಟಿನ ಬಗೆಗಿನ ಪ್ರಶ್ನೆಗಳು, ವಿಚ್ಛೇದನ, ವೈವಾಹಿಕ ಚೌಕಟ್ಟು ಮುರಿದಾಗ ಉದ್ಭವವಾಗುವ ಸಮಸ್ಯೆಗಳು, ಹಲವರ ಜೊತೆಗಿನ ಸಂಬಂಧದ ಒಳನೋಟಗಳು ಇಲ್ಲಿನ ಕವನಗಳ ಮುಖ್ಯವಸ್ತು. ಪ್ರೀತಿ - ಇವೆಲ್ಲದರ ಹಿಂದಿರುವ ಒಳತೋಟಿ. ಒಂಟಿತನ, ಬದುಕಲೇಬೇಕೆಂಬ ಛಲ, ಹೋರಾಟ, ಅಂತರಂಗಧ ಹೊಯ್ದಾಟ, ನಮಗೇ ಎದುರಾಗಬಹುದಾದ ವೈರುಧ್ಯಗಳು ಇವೆಲ್ಲವನ್ನೂ ಈ ಕವನ ಸಂಕಲನ ಚಿತ್ರಿಸುತ್ತದೆ. ಇವೆಲ್ಲದರ ಮಧ್ಯೆ ದೇಹ, ಆತ್ಮ ಬಾಗಿಸಬಲ್ಲ ಶಕ್ತಿಯಿರುವ ಕವನ ಅಭಿವ್ಯಕ್ತಿ ಪಡೆದುಕೊಳ್ಳುತ್ತದೆ. ಬದುಕು, ಬದುಕಿನ ಹೋರಾಟ, ಕಲೆ ಬದುಕನ್ನು ಜೀರ್ಣಿಸಿಕೊಳ್ಳುವ ಬಗೆ - ಇಂತಹ ಪ್ರಶ್ನೆಗಳ ಮೂಲಕ ಬದುಕು ಹಾಗೂ ಕಲೆಯ ಸಂಬಂಧವನ್ನು ಸಹ ಈ ಕವನ ಸಂಕಲನ ಚಿತ್ರಿಸುತ್ತದೆ.

‘ಹಾದರಕ್ಕಿಳಿದ ಸದರ’ - ಕವನಸಂಕಲನದ ಮೊದಲನೆಯ ಕವನ ಹೆಣ್ಣು ಮಗುವಿಗಾಗಬಹುದಾದ ಅನುಭವಗಳ ಬಗ್ಗೆ ಹೇಳುತ್ತಲೇ ‘ಬೆಚ್ಚನೆಯ ಕತ್ತಲನು ಕಟ್ಟುತ್ತ ಒಳಸೋತೆ, ನಾನೇಕೆ ಎಲ್ಲ ಕತ್ತರಿಸುವ ಖಡ್ಗವಾಗಲಿಲ್ಲ’ - ಎಂಬ ರೋಷ ವ್ಯಕ್ತಗೊಳ್ಳುತ್ತದೆ. ಪ್ರತಿಭಟಿಸಬೇಕಿತ್ತು ಎನ್ನುವ ಧ್ವನಿ ಇಲ್ಲಿ ಇದೆ.

‘ಕಣ್ಣ ಸನ್ನೆಯಲೆ ಕರೆದವನು’ - ಹೆಣ್ಣಿನ ಬದುಕಿನ ವೈರುಧ್ಯಗಳನ್ನು ಕುರಿತು ಮಾತನಾಡುತ್ತದೆ. ನೋವಿನ ಧ್ವನಿ ಇಡಿಯ ಕವನದಲ್ಲಿ ವ್ಯಾಪಿಸಿದೆ. ಕಣ್ಣ ಸನ್ನೆಯಲಿ ಕರಗಿ ಹೋಗುವ ಬಗೆ, ಮತ್ತೆ ಮತ್ತೆ ಕರೆದಿರಿ, ಸುತ್ತ ಸುಳಿದು ಕಾಡಿದಿರಿ’ ಎನ್ನುವ ಸಾಲಿನಲ್ಲಿ ಅಭಿವ್ಯಕ್ತಿಗೊಳ್ಳುತ್ತದೆ. ‘ಮೂವತ್ತು ವರುಷದ ನೋವು ಮುಕ್ತಳಾದೆನು ನಾನು’ ಎನ್ನುವ ಕವಿಯಿತ್ರಿ ಹೆಣ್ಣಿನ ಕನಸು ಚಿಗುರಿದ್ದನ್ನು, ಕಿಚ್ಚು ಹೊತ್ತಿದ್ದನ್ನು, ರೋಮಾಂಚನಗೊಂಡಿದ್ದನ್ನು ಹೇಳುತ್ತಲೇ ಅದರೊಳಗೇ ಇರುವ ಹೊಸಹಗಲ ಕೊಸರಾಟಗಳನ್ನೂ ಹೇಳುತ್ತಾರೆ. ಈ ರೀತಿಯ ಅನುಭವಗಳಿಗೆ ದ್ವಂದ್ವಗಳಿಲ್ಲದೇ ಹೆಣ್ಣು ತನ್ನನ್ನು ಪೂರ್ತಿಯಾಗಿ ತೊಡಗಿಸಿಕೊಳ್ಳಲಾರಳು. ಯಾಕೆಂದರೆ ಕೊಸರಾಟಗಳೆನ್ನೆಲ್ಲ ಕಣ್ಣ ಸನ್ನೆಯವರು ತಿಳಿನಗೆಯಲ್ಲಿಯೇ ತೂರಿಬಿಡುತ್ತಾರೆ. ಆದರೆ ಹಾಗೆ ಅನುಭವಕ್ಕೆ ಹಗುರವಾದ ನೋಟ ಹೊಂದುವುದು ಹೆಣ್ಣಿಗೆ ಅಸಾಧ್ಯವಾಗುತ್ತದೆ. ಗಂಡು ತಿಳಿನಗೆ ಸೂಸಿಬಿಡುವಾಗ, ಇಂತಹ ಕೊಸರಾಟಗಳನ್ನು ಸರಳವಾಗಿ ತೆಗೆದುಕೊಂಡುಬಿಡುವಾಗ ಹೆಣ್ಣಿಗೆ ತಾನು victimized ಎನ್ನುವ ಭಾವನೆ ರೂಪಿತವಾಗಿಬಿಡುತ್ತದೆ. ಈ ರೀತಿಯ ಹೆಣ್ಣು - ಗಂಡಿನ ಭಿನ್ನ ಮನಸ್ಸಿನ ಚಿತ್ರಣ ಇಲ್ಲಿನ ಹಲವಾರು ಕವನಗಳಲ್ಲಿ ಕಂಡುಬರುತ್ತದೆ.

‘ನೋವುಗಳ ಮೂಲದಲ್ಲೇ ಹುಟ್ಟಬೇಕು ಪ್ರೀತಿ’ - ಈ ಕವನದಲ್ಲಿ ವೈವಾಹಿಕ ಚೌಕಟ್ಟು ಮುರಿದ ಹೆಣ್ಣಿನ ಮನಸ್ಥಿತಿ ಚಿತ್ರಣಗೊಂಡಿದೆ. ಒಂಟಿತನ, ಕರಗದ ಯೌವ್ವನ, ಪ್ರೀತಿಯ ಅರಕೆ ಇವು ಇಲ್ಲಿನ ನೋವುಗಳು, ಮದುವೆಯಾಚೆಗಿನ ಸಂಬಂಧಗಳಲ್ಲಿ ‘ಗಂಡುತನ’ ತೋರಬಯಸುವವರೇ ಹೆಚ್ಚು ; ಎಳೆ ಎಳೆಯಾದ ಪ್ರೀತಿ ದಕ್ಕಲಿಲ್ಲ ಎನ್ನುತ್ತಾಳೆ ಕವನದ ನಾಯಕಿ. ಈ ಕವನ ಗಂಡಿನ ಮನಸ್ಸಿನ ‘ಪ್ರೀತಿ’ಯ ನೆಲೆ ಹಾಗೂ ಹೆಣ್ಣಿನ ಮನಸ್ಸಿನ ‘ಪ್ರೀತಿ’ಯ ನೆಲೆಯ ವೈರುಧ್ಯಗಳನ್ನು ಚಿತ್ರಿಸುತ್ತದೆ. ಸಿಗರೇಟಿನ ಬೆಂಕಿ, ಕುಡಿವ ಮದಿರೆ, ಮುತ್ತಿನಾಟಕ್ಕೆ ಒದಗಿಸಿದ ತುಟಿಗಳು ಯಾವುದೂ ದೇಹ, ಆತ್ಮ ಬಾಗಿಸದಿದ್ದಾಗ ಕವನದೊಂದಿಗೆ ಸಂವಾದ ನಡೆಸುತ್ತೇನೆ ಎನ್ನುತ್ತಾಳೆ. ಮತ್ತೆ ಮತ್ತೆ ಪ್ರೀತಿ, ನೀತಿ, ಖ್ಯಾತಿ, ಜ್ವಾಲೆ ಇವೆಲ್ಲ ಆಕೆಯ ಮನಸ್ಸಿನೊಳಗೆ ರಂಗಾಡುತ್ತವೆ. ಒಂದಡೆ ಬದುಕುವ ಹಟಕ್ಕಾಗಿ ಮೇಲಿನ ಎಲ್ಲಾ ವೈರುಧ್ಯಗಳೊಳಗೂ ಬದುಕುತ್ತೇನೆ ಎನ್ನುವ, ಇನ್ನೊಂದೆಡೆ ಬಾಗದ ದೇಹ, ಆತ್ಮಕ್ಕೆ ಕಾವ್ಯದೊಂದಿಗೇ ಸಂವಾದ ನಡೆಸುತ್ತೇನೆ ಎನ್ನುವ ಇಲ್ಲಿನ ನಾಯಕಿ ಹೆಣ್ಣಿನ ಮನಸ್ಸಿನ

ವೈರುಧ್ಯಗಳನ್ನೂ ಬಿಚ್ಚಿಡುತ್ತಾ ಹೋಗುತ್ತಾಳೆ, ಆಕೆಯ ಆತಂಕದ ಕ್ಷಣಗಳನ್ನು ಚಿತ್ರಿಸುತ್ತಾಳೆ.

'ಉಬ್ಬರದ ಒಂದು ಕ್ಷಣ'ವೂ ಕೂಡಾ ವೈವಾಹಿಕ ಚೌಕಟ್ಟು ಮುರಿದ ನಂತರ ಮತ್ತೆ ಬೆರೆಯಲಾರದ ಬಿರುಕು ಮನಸ್ಸನ್ನು ಕಂಡು ಮಾತನಾಡುತ್ತದೆ. 'ನಿನ್ನಿಂದ ನಾನು ಕಳೆದುಕೊಂಡದ್ದನ್ನು ನೀನೇ ನನಗೆ ಕಟ್ಟಿ ಕೊಡಬೇಕು' ಎನ್ನುವ ಧ್ವನಿಯಲ್ಲಿ ವೇದನೆ ಇದೆ. ಕೆಲವೊಮ್ಮೆ ಗಂಡಸರ ಭಾಷೆ ಕೂಡಾ ಇವರ ಕವನಗಳ ಸಾಲುಗಳಲ್ಲಿ ವ್ಯಕ್ತವಾಗುತ್ತದೆ. 'ಕರ್ತವ್ಯಕ್ಕೆ ಗೋಲಿ ಹೊಡಿ' ಎನ್ನುವ ಸಾಲು ಇದನ್ನು ಅಭಿವ್ಯಕ್ತಿಸುತ್ತದೆ. ಹಗುರ, ವ್ಯಂಗ್ಯ, ಸರಳವಾದ ಈ ಭಾಷೆ ಹೆಣ್ಣಿನಲ್ಲಿರಬಹುದಾದ ಗಂಡಸಿನ ಮಾನಸಿಕ ಸ್ಥಿತಿಯನ್ನೇ ವ್ಯಕ್ತಪಡಿಸುತ್ತದೆ.

'ದುಗುಡ ಗಂಡಸರ ಮೆಚ್ಚುಗೆ ಪಡೆದಿತ್ತು' (ಈಗ ದ್ವೇಷಿಸಲೂ ಬಲ್ಲೆ) ' ನೂರೆಂಟು ಪ್ರಿಯತಮರು, ಒಬ್ಬನೇ ತಬ್ಬಿಕೊಳ್ಳಲಿ ನನ್ನ,', (ನನಗೆ ಬೇಕಾದ ದಿನ ನೀನು ಬರಲೇ ಇಲ್ಲ) 'ಸಾವ ಕೆಡುವ ಗಂಡಕೀ ಸುತ್ತ ಮುತ್ತ ; (ಅಕ್ಕನಿಗೆ), 'ಈ ಜಗದ ಗಂಡುಗಳೆಲ್ಲ ತಮ್ಮೊಳಗೆ ತಾವೊಂದು ಭದ್ರಕೋಟೆ; (ಕಿವಿಮಾತು) ಈ ಸಾಲುಗಳು ಕೌಟುಂಬಿಕ ಬಂಧನದಿಂದ ಹೊರಬಂದು ಸ್ವತಂತ್ರವಾಗಿ ಗಂಡಿನ ಸಂಬಂಧದಲ್ಲಿ ತೊಡಗ ಬಯಸುವ ಹೆಣ್ಣಿನ ಅನುಭವ, ಮನಸ್ಥಿತಿಯನ್ನು ಹೇಳುತ್ತವೆ.

ಗೃಹಿಣಿಯರ ಬದುಕಿನ ಬಗ್ಗೆಗಿನ ಹಲವು ಒಳನೋಟಗಳನ್ನೂ ಸಹ ಈ ಕವನ ಸಂಕಲನ ನೀಡುತ್ತದೆ. 'ಕಾಣದ ದೇವರೊದಿಗೆ ಸ್ನೇಹ ಸಾಧಿಸಿ ನಗೆಯ ಕೊಂಡವರ ಕಂಡಿದ್ದೇನೆ;, 'ಭಕ್ತಿ ಭಾವವೂ ಬೇಡ, ಕಾಮ ದಾಹವೂ ಬೇಡ, ಬಂಡೆದ್ದು ನೋಡಿ ಒಮ್ಮೆ; (ಬಂಡೆದ್ದು ನೋಡಿ ಒಮ್ಮೆ) "ಮನೆಯ ಕಲ್ಲು ಕಲ್ಲುಗಳಲ್ಲಿ ಎದೆಯ ಕತೆ ಹೂತಿಟ್ಟು ;" (ಬದುಕೆಂದರೇನು ?)

ಗಂಡು ಬರಲಿಲ್ಲ
ನಗೆಯ ತರಲಿಲ್ಲ
ತನ್ನಲೇ ತಾನು ನಕ್ಕಳವಳು
ಏನೋ ಕಿಲ ಕಿಲ ಅಂದಿತು
ತನ್ನಲೇ ತಾನೇ ಮಾತಾಡಿಕೊಂಡಳು
ಹೊಸ ಅರ್ಥ ಮೂಡಿ ಬಂತು
ದುಗುಡ ತುಂಬಿದ ಎದೆಗೆ
ಹಲವಾರು ರಂಧ್ರ ಮಾಡಿ
ತಾನೇ ಒಂದು ಕೊಳಲಾದಳು!

ಇಲ್ಲಿ ಕೆಲವು ಕಡೆ ಗೃಹಿಣಿಯರಿಗೆ ಬಂಡೆದ್ದು ನೋಡಿ ಎನ್ನುತ್ತಾರೆ. ಇನ್ನು ಕೆಲವು ಕಡೆ ಬೆಚ್ಚನೆಯ ಮನೆ, ನೊಚ್ಚನೆಯ ಆಶ್ರಯ ಮಾಯಾವಾದಾಗ ಗೃಹಿಣಿ ಆಕೆಯ ಬದುಕಿನ ಸೃಷ್ಟ್ಯಾತ್ಮಕ ಆಯಾಮಗಳನ್ನು ಆಕೆಯೇ ಕಂಡುಕೊಳ್ಳುವುದನ್ನು ಸಹ ಕವಯಿತ್ರಿ ಹೇಳುತ್ತಾರೆ. ಬಂಡೇಳುವ ಗೃಹಿಣಿ - ಗೃಹ ಬಂಧನ ಧಿಕ್ಕರಿಸಿ ಬಂದಾಗ ಹೊರಗಿನ ಬದುಕಿನ ಆತಂಕಗಳು ಒಂದು ರೀತಿ. ಹಾಗೆ ಬರದೇ ಇರುವಾಗ ಇರುವ ಆತಂಕಗಳು ಇನ್ನೊಂದು ರೀತಿ. ಹಾಗೆ ಬರದೇ ಇರುವ ಸಂದರ್ಭಗಳಲ್ಲಿ ಗೃಹಿಣಿ ದುಗುಡ ತುಂಬಿದ ಎದೆಗೆ ಹಲವಾರು ರಂಧ್ರ ಮಾಡಿ, ತಾನೇ ಒಂದು ಕೊಳಲಾದಳು ಎನ್ನುವಲ್ಲಿ ಹಲವಾರು ಸಾಧ್ಯತೆಗಳನ್ನು ಆಕೆಯೇ ಸೃಷ್ಟಿಸಿಕೊಳ್ಳುವ ಬಗೆಯನ್ನು ಹೇಳಲಾಗಿದೆ.

ಪ್ರಸ್ತುತ ಸಾಮಾಜಿಕ ಮೌಲ್ಯಗಳು 'ಕುಟುಂಬ', 'ಮನೆ'ಯ ಬಗ್ಗೆ ಹಲವಾರು ಮಿಥ್‌ಗಳನ್ನು ಹುಟ್ಟುಹಾಕಿವೆ. ಹೊರ ಜಗತ್ತಿನಲ್ಲಿ ದುಡಿಯುವ ಹೆಣ್ಣಿಗೂ 'ಮನೆಯ ಸುಖದ' ಅಗತ್ಯವಿದೆ. ಮೆಲು ನಗೆಯ ಸ್ವಾಗತ, ಬಿಸಿ ಕಾಫಿಯ ಅಗತ್ಯ ಆಕೆಗೂ ಇರುತ್ತದೆ. ಆದರೆ ಇಂದು ದುಡಿಯುವ ಹೆಣ್ಣು ಅದರಿಂದಲೂ ವಂಚಿತಳು. ಆಕೆ ಆಗಮಿಸಿದಾಗ ಆತ ಆಕ್ರಮಣ ನಡೆಸುತ್ತಾನೆ. ಕೆಲಸವಿಲ್ಲದ ಗಂಡು ಆತ. ಮತ್ತೆ ಮೇಲೇರಿ ಬಂದಾಗ ಆಕೆ ವಿರೋಧಿಸುತ್ತಾಳೆ. ಆಕೆಯನ್ನು ಆತ ಹೊರಗಟ್ಟುತ್ತಾನೆ. ಆಕೆಯದು ಮಂಜುಗಡ್ಡೆಯ ಹೃದಯ. ಈ ರೀತಿಯ ಪ್ರಕ್ಷುಬ್ಧ ಮನಸ್ಥಿತಿಯನ್ನು, ಆತಂಕವನ್ನು 'ಮನೆಯಿರದ ರಾತ್ರಿ' ಕವನ ಸಂಕಲನ ಬಿಚ್ಚಿ ಇಡುತ್ತದೆ.

ಹೊರ ಜಗತ್ತಿನ ಸ್ಪರ್ಧೆ, ಮತ್ಸರ
ಉರಿಯುಬ್ಬರಗಳನ್ನೆಲ್ಲಾ
ಒಳಕೋಣೆಗೆ ತಂದು
ಸಂಭೋಗದಲಿ ಇರಿದ (ಅವನು)

ಮನೆಯೊಳಗೇ ನಿಗೂಢವಾಗಿ ನಡೆಯುವ ಮನುಷ್ಯ ವ್ಯಾಪಾರಗಳಿವು. 'ಮನೆ' ಎನ್ನುವುದು ಗಂಡು, ಹೆಣ್ಣು ಇಬ್ಬರಿಗೂ ಹಿತವಾದ ಸಖ್ಯ. ಆದರೆ ಬಹುತೇಕ ಗಂಡಸರಿಗೆ ಸಾರ್ವಜನಿಕ ನೋವು-ಅವಮಾನ-ದುಗುಡಗಳಿಗೆ ಸಮಾಧಾನವನ್ನು ವೈಯಕ್ತಿಕ ಬದುಕಿನಲ್ಲಿ, ಕುಟುಂಬದಲ್ಲಿ, ಮನೆಯಲ್ಲಿ ಕಂಡುಕೊಳ್ಳುವು ದಾಗಿರುತ್ತದೆ. ಹೆಣ್ಣಿನ ಜೊತೆಗಿನ ದೈಹಿಕ ಸಂಬಂಧ ಕೂಡಾ ಹೊರಗಿನ ಪ್ರಪಂಚದ ನೋವುಗಳನ್ನು ಮೀರುವುದಕ್ಕೇ ಆಗಿರುತ್ತದೆ. ಸಾರ್ವಜನಿಕ / ವೈಯಕ್ತಿಕ ಈ ಇಬ್ಬಗೆಯ ದ್ವಂದ್ವಗಳನ್ನು ಸಹ ಇಲ್ಲಿಯ ಹಲವಾರು ಕವನಗಳು ಬಿಚ್ಚಿ ಇಡುತ್ತವೆ. ಮನೆಯೊಳಗೇ ನಡೆಯುವ, ನ್ಯಾಯಬದ್ಧ ಎನ್ನಿಸುವ ಸಂಬಂಧದಲ್ಲಿನ ಕಾಮದ ರಾಜಕೀಯ ಮುಖವನ್ನು ಸಹ ಇಲ್ಲಿಯ ಹಲವು ಕವನಗಳು ಚಿತ್ರಿಸುತ್ತವೆ.

ಕಲೆ ಹಾಗೂ ಬದುಕಿನ ಮಧ್ಯದ ಸಂಬಂಧವನ್ನು ಇವರ

ಹಲವಾರು ಕವನಗಳಲ್ಲಿ ಕಾಣಬಹುದಾಗಿದೆ. 'ಕಟ್ಟುತ್ತಿದ್ದೇನೆ ಅರಳಿ ನಗುವ ಕವನಗಳ, ನನ್ನ ಜೀವನಾಧಾರ ಈ ಕವನಗಳ; (ಮತ್ತೆ ಮತ್ತೆ ಮಾತಾಡಬೇಕು);

ಬದುಕಿಗೆ ಬರೆದಿಟ್ಟ ಅರ್ಥ ಸಾವು
ಸಾವು ಮೊದಲ ಕವಿತೆ
ಆತಂಕದ ಪಾತಳಿಯಲ್ಲಿ ಕವನದ ಹುಟ್ಟು
ಪೆಟ್ಟ ಮೇಲೆ ಪೆಟ್ಟು ಬಿದ್ದು
ಬುಸ್ಸೆಂದು ಕೆರಳಿತ್ತು ಕವಿತೆ

ಮುದ್ದೆ ಮಾಡಿ ಎಸೆದ ಕಾವ್ಯ
ನಾನೇ ನಿನ್ನ ಆಪ್ತ ಗೆಳತಿ
ನನ್ನ ಬಿಟ್ಟು ನೀ ಇರೆ
ಎಂದು ಪಿಸು ನುಡಿಯುತ್ತ
ಸಾವ ಮರೆಸಿ ಮೂಡಿತ್ತು (ಆಪ್ತ ಗೆಳತಿ)

ವೈವಾಹಿಕ ಜೀವನಕ್ಕೆ ಒಗ್ಗದ ಮನಸ್ಸು, ನೂರೆಂಟು ಪ್ರಿಯಕರರಿಗೊಲಿಯದ ಮನಸ್ಸು/ದೇಹ ಒಗ್ಗುತ್ತದೆ ಕಲೆಗೆ - ಕಾವ್ಯಕ್ಕೆ. ಕಲೆ ಬದುಕನ್ನು ಜೀರ್ಣಿಸಿಕೊಳ್ಳುತ್ತದೆ, ಆತ್ಮ, ದೇಹವನ್ನು ಬಗ್ಗಿಸುತ್ತದೆ. ಬೋದಿಲೇರನ 'ಪಾಪದ ಹೂಗಳು' ರೀತಿ ಸ್ವತಂತ್ರ್ಯವಾಗಿ ಬದುಕಿಗೆ ಮುಖ ಒಡ್ಡುವ ಹೆಣ್ಣು ಬೆಂದು ಬೆಂದು ಮತ್ತೆ ಹುಟ್ಟಬೇಕಾಗಿದೆ. ಮರು ಹುಟ್ಟುವಿಕೆಯ ಆಶಯ 'ಕವನ' ಕಲೆಯಲ್ಲಿ ವ್ಯಕ್ತಗೊಳ್ಳುತ್ತದೆ.

ಉಮರ್ ಖಯ್ಯುಂ ತತ್ವ ಹೆಣ್ಣಿನ ಅನುಭವವಲ್ಲ. ಮದಿರೆ, ಸಿಗರೇಟು, ದೇಹದಪ್ಪುಗೆ ಇವು ಹೋರಾಟದ ಹಾದಿಯಲ್ಲಿ ಬರೆಯತೊಡಗಿದ ಬದುಕಿನ ಹೋರಾಟದ ಆಯಾಮಗಳು. ಗಂಡು ಮನಸ್ಸು ಮದಿರೆ, ಸಿಗರೇಟು, ದೇಹ ದಪ್ಪುಗೆ ಇವುಗಳಲ್ಲಿ ಆ ಕ್ಷಣಕ್ಕೆ ಕರಗಿ ಬದುಕಿನ ಅರ್ಥ, ತತ್ವ ಇದೇ ಎನ್ನುವ ರೀತಿಯಲ್ಲಿ ಅಂಟಿಕೊಳ್ಳಲಾರದಂತೆ ಮುನ್ನಡೆಯುತ್ತಾನೆ. ಆದರೆ ಸಾಮಾಜಿಕ ಬಂಧನಗಳಲ್ಲಿ ತೊಳಲುವವಳು ಹೆಣ್ಣೇ. ಇವೆಲ್ಲದರ ಮಧ್ಯೆ ಹಗಲ ಕೊಸರಾಟಗಳು ಆಕೆಗೆ ಕಾಣಿಸುತ್ತವೆ. ಹೀಗಿರುವ ದ್ವಂದ್ವ, ತುಯ್ದಾಟಗಳೇ ಇಲ್ಲಿಯ ಕವನಗಳ ಮುಖ್ಯ ವಸ್ತು. ಸೃಷ್ಟ್ಯಾತ್ಮಕ ನೆಲೆಯುತ್ತ ಸಾಗುವ 'ಆಶಯ' ಕೆಲವು ಕವನಗಳಲ್ಲಿದ್ದರೆ, ಆಕೆ victimized ಎನ್ನುವ ಭಾವನೆ ಕೆಲವು ಕವನಗಳಲ್ಲಿದೆ. ಮೊದಲೇ ಹೇಳಿದ ಹಾಗೆ ಪಾಠ್ಯವಾಗಿರುವುದು ಈ ಸಂಕಲನದ ಮಿತಿಯಾದರೂ ಸಮಸ್ಯೆಗಳ ಪ್ರಸ್ತುತತೆಯಿಂದಾಗಿ ಗಮನ ಸೆಳೆಯುತ್ತದೆ. ●

ಸುಪ್ರೀಂ ಕೋರ್ಟ್ ಎತ್ತಿ ಹಿಡಿದ ವಿಧವೆಯ ಆಸ್ತಿಯ ಹಕ್ಕು

ಜುಲೈ ೧೬ರಂದು ಸುಪ್ರೀಂ ಕೋರ್ಟ್ ಮಹತ್ತರವಾದ ತೀರ್ಪನ್ನು ನೀಡಿದೆ. ಮಧ್ಯಪ್ರದೇಶದ ಹೈಕೋರ್ಟ್ ನೀಡಿದ ತೀರ್ಪನ್ನು ತಳ್ಳಿಹಾಕುತ್ತಾ, ಗಂಡನ ಮನೆಯ ಆಸ್ತಿಯಿಂದಲೇ ಹಿಂದೂ ವಿಧವೆಯ ಜೀವನ ನಿರ್ವಹಣೆ ನಡೆಯಬೇಕೆಂಬ ತೀರ್ಪನ್ನು ನೀಡಿದೆ.

ನ್ಯಾಯಮೂರ್ತಿ ಎ.ಎಸ್. ಆನಂದರವರು ನೀಡಿದ್ದ ತೀರ್ಪಿನಲ್ಲಿ ವಿಧವೆ, ಪುನಃ ವಿವಾಹವಾಗದೇ ಉಳಿದಿರುವವರೆಗೆ ವಿಧವೆಗೆ ಗಂಡನ ಮನೆಯ ಆಸ್ತಿಯ ಉತ್ತರಾಧಿಕಾರದ ಹಕ್ಕು ಹಿಂದೂ ವಿಧವೆಗೆ ಅನ್ವಯವಾಗುತ್ತದೆ. ಮನ್‌ರಾಜ್‌ಸಿಂಗ್ ಮಹಾರಾಜ ತಾನು ಸಾಯುವ ಮೊದಲ ತನ್ನ ಆಸ್ತಿಯನ್ನು ತನ್ನ ಹೆಂಡತಿಯ ಹೆಸರಿಗೆ ವಿಲ್ ಮಾಡಿದ್ದ. ೧೯೪೭ರಲ್ಲಿ ಮನ್‌ರಾಜ್‌ಸಿಂಗ್ ಮರಣಹೊಂದಿದ ನಂತರ ಹೆಂಡತಿಯೇ ಉತ್ತರಾಧಿಕಾರಿಯಾಗಿ ಆಸ್ತಿಯನ್ನು ಅನುಭವಿಸುತ್ತಿದ್ದಳು. ೧೯೬೬ರಲ್ಲಿ ಆಕೆಯ ಮರಣದ ನಂತರ ಮನ್‌ರಾಜ್‌ಸಿಂಗ್ ಬರೆದ ವಿಲ್‌ನ್ನು ವಜಾಮಾಡಬೇಕೆಂದು, ಮನ್‌ರಾಜ್‌ಸಿಂಗ್‌ನ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾದುದರಿಂದ, ಅವನ ಹೆಂಡತಿಯು ಕೇವಲ ಅವಳ ಜೀವಿತಾವಧಿಯಲ್ಲಿ ಮಾತ್ರ ಅನುಭವಿಸುವ ಹಕ್ಕನ್ನು ಹೊಂದಿದ್ದಳೆಂದು ಕುಟುಂಬದ ಸಂಬಂಧಿಯೊಬ್ಬರು ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದರು.

ಟ್ರಯಲ್ ಕೋರ್ಟ್ ಹಿಂದೂ ಉತ್ತರಾಧಿಕಾರಿ ಕಾನೂನು ೧೯೫೬ರ ಅನ್ವಯ ಜಾನಕಿ ದುಲಾರಿಯ ಜೀವಿತ ಅವಧಿಯಲ್ಲಿ ಅನ್ವಯವಾಗುವ ಮೃತ್ಯುಪತ್ರ ಅವಳ ಮರಣದ ನಂತರ ಹಿಂದೂ ಉತ್ತರಾಧಿಕಾರಿ ಕಾನೂನು ಅವಳ ಮರಣದ ನಂತರ ಅನ್ವಯವಾಗುವುದಿಲ್ಲವೆಂದು ತಳ್ಳಿಹಾಕಿತು.

ಹೈಕೋರ್ಟ್ ಸಹ ಟ್ರಯಲ್ ಕೋರ್ಟ್‌ನ ತೀರ್ಪನ್ನು ಎತ್ತಿಹಿಡಿಯಿತು. ಜೊತೆಗೆ ೧೯೬೭ರ ನಿರ್ವಹಣಾ ಕಾಯಿದೆ ರೇವಾ ಎಸ್ಟೇಟ್‌ಗೆ ಅನ್ವಯವಾಗುವುದಿಲ್ಲವೆಂಬ ತೀರ್ಪನ್ನು ನೀಡಿತು.

ಹೈಕೋರ್ಟ್ ನೀಡಿದ ತೀರ್ಪನ್ನು ಸುಪ್ರೀಂ ಕೋರ್ಟ್ ತಳ್ಳಿಹಾಕುತ್ತಾ, ಹಿಂದೂ ಶಾಸ್ತ್ರಗಳ ಪ್ರಕಾರ ಮದುವೆಯು ಒಂದು ಪವಿತ್ರ ಬಂಧನವಾದುದರಿಂದ, ವಿವಾಹವಾಗುವ ಸ್ತ್ರೀ ಪುರುಷನ ಅರ್ಧಾಂಗಿನಿಯಾದುದರಿಂದ, ಆಕೆ ವಿಧವೆಯಾದರೂ ಆಕೆಯ ಗಂಡನ ಆಸ್ತಿಯಿಂದ ಜೀವನ ನಿರ್ವಹಣೆಯ ಹಕ್ಕನ್ನು ಆಕೆಗಿದೆಯೆಂಬ ತೀರ್ಪನ್ನು ನೀಡಿದೆ.

ಸಾಮಾನ್ಯವಾಗಿ ಗಂಡ ಸತ್ತ ಕೂಡಲೇ ಸೊಸೆಯನ್ನು ಹೊರಗೆ ಹಾಕಿಬಿಡುವ ಸಂದರ್ಭದಲ್ಲೀ ತೀರ್ಪು ಅಮಾಯಕ ಹಾಗೂ ಅಸಹಾಯಕ ವಿಧವೆಯರಿಗೆ ರಕ್ಷಣೆಯನ್ನು ನೀಡುತ್ತದೆ. ಆದರೆ, ಪ್ರಗತಿಪರ ತೀರ್ಪನ್ನು ನೀಡುವ ಬೆನ್ನಲ್ಲೇ ಆಕೆಯ ಪಾವಿತ್ರ್ಯತೆಯ ಕಲ್ಪನೆಯನ್ನು ಬಲಪಡಿಸುವ ಸಂಪ್ರದಾಯ ನೋಟವನ್ನು ಒಳಗೊಂಡಿದೆ. ●

'ತಲಾಕ್' ಪ್ರಶ್ನಿಸಿದ ಮಹಿಳೆ

ಮುಸ್ಲಿಂ ವೈಯಕ್ತಿಕ ಕಾನೂನಿನ ಪ್ರಕಾರ ತಲಾಕ್ ಮೂಲಕ ಹೆಂಡತಿಗೆ ವಿಚ್ಛೇದನ ನೀಡುವ ವಿಧಾನವನ್ನು ಮುಸ್ಲಿಂ ಮಹಿಳೆಯೊಬ್ಬರು ಮದ್ರಾಸ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಿ ಸಂವಿಧಾನಾತ್ಮಕ ಸಮರ್ಥನೆಯನ್ನು ಪ್ರಶ್ನಿಸಿದ್ದಾರೆ.

ಮುಸ್ಲಿಂ ವೈಯಕ್ತಿಕ ಕಾನೂನಿನ ಎರಡನೇ ಸೆಕ್ಷನ್ ಅನ್ನು ಪ್ರಶ್ನಿಸಿರುವ ಎ.ಎಸ್. ಪರ್ವಿನ್ ಅಕ್ತಲ್ ತನ್ನ ಗಂಡ ಇಸ್ಮಾಯಿಲ್ ಫರೂಕ್ ಅವಳ ಗೈರುಹಾಜರಿಯಲ್ಲಿ ತನ್ನ ಇಚ್ಛಾನುಸಾರ ತಲಾಕ್ ಅನ್ನು ಉಚ್ಛರಿಸಿ, ವಿಚ್ಛೇಧನ ನೀಡಿದ್ದಾನೆಂದು ಆರೋಪಿಸಿದ್ದಾಳೆ.

ತಲಾಕ್ ಹೇಳುವುದರ ಮೂಲಕ ವಿಚ್ಛೇದನ ನೀಡಿರುವುದನ್ನು ಸಂವಿಧಾನ ವಿರೋಧಿಯಾದುದರಿಂದ ಅಸಿಂಧು ಗೊಳಿಸಬೇಕೆಂದು ಮನವಿ ಸಲ್ಲಿಸಿದ್ದಾರೆ. ನ್ಯಾಯಾಧೀಶರಾದ ಸದಾಶಿವನ್ ತಲಾಕ್ ಮಾದರಿಯ ವಿಚ್ಛೇದನದ ಮೂಲಕ ಮುಸ್ಲಿಂ ಜನಾಂಗದ ಮಹಿಳೆಯರು ಅನಾಥ ಹಾಗೂ ದಿಕ್ಕಿಲ್ಲದವರಾಗುತ್ತಾರೆಂದು ಹೇಳುತ್ತಾ, ಈ ಮನವಿಯು ಈ ಜನಾಂಗದ ಮಹಿಳೆಯರ ಜೀವನದ ಮೇಲೆ ಮಹತ್ತರವಾದ ಪರಿಣಾಮ ಬೀರುತ್ತದೆಯೆಂದು ನುಡಿದಿದ್ದಾರೆ.

ಓದುಗರಿಗೊಂದು ಮನವಿ

ಕಳೆದ ಹನ್ನೆರಡು ವರ್ಷಗಳಿಂದ 'ಮಾನಸ' ತಿಂಗಳ ಪತ್ರಿಕೆಯನ್ನು ಓದುಗರ ಹಾಗೂ ಸಹೃದಯರ ಸಹಕಾರದಿಂದ ಪ್ರಕಟಿಸುತ್ತಿದ್ದೇವೆ. ಯಾವುದೇ ವಿದೇಶಿ ಸಂಸ್ಥೆಯ ಹಾಗೂ ಸರ್ಕಾರದ ನೆರವಿಲ್ಲದೆ ಸ್ವಾಯತ್ತವಾಗಿ ಮಹಿಳೆಯರೇ 'ಮಾನಸ' ಪತ್ರಿಕೆಯನ್ನು ಪ್ರಕಟಿಸುತ್ತಿದ್ದೇವೆ. ಕರ್ನಾಟಕದ ಮಹಿಳಾ ಚಳುವಳಿಯಲ್ಲಿ 'ಮಾನಸ'ದಂತಹ ಪತ್ರಿಕೆಯ ಪಾತ್ರ ಮಹತ್ತರವಾದುದೆಂದು ನಾವು ನಂಬಿದ್ದೇವೆ. ನಮ್ಮ ಈ ನಂಬಿಕೆಯನ್ನು ಇದುವರೆಗೆ ನೀರೆರೆದು ಪೋಷಿಸಿದವರು ನೀವು.

ಚಂದಾವನ್ನು ಸಕಾಲದಲ್ಲಿ ನವೀಕರಿಸುವುದರೊಂದಿಗೆ 'ಮಾನಸ' ಪತ್ರಿಕೆಗೆ ಹಾಗೂ ಮಾನಸದ ಚಟುವಟಿಕೆಗಳಿಗೆ ವರ್ಷಕ್ಕೆ 100/- ರೂ. ಕೊಡುಗೆಯಾಗಿ ನೀಡಬೇಕೆಂದು ಓದುಗರನ್ನು ಕೋರುತ್ತೇವೆ. ನೀವು ನೀಡುವ ಈ ನೆರವು 'ಮಾನಸ'ವನ್ನು ಬೆಳೆಸುವಲ್ಲಿ ನೆರವಾಗುತ್ತದೆ.

ಸಂ. ಮಂ.

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 40 ರೂ.

ಸಂಸ್ಥೆಗಳಿಗೆ : 75 ರೂ

ಸಂ. ಮಂಡಳಿ

REGD No. KRNA 271

BOOK-POST
PRINTED MATTER

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067